# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ

ಆಡಳಿತ ಕಛೇರಿ : 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.
Tel. : 22217905, 22237655 Fax : 22231352 E-mail : textilecbl@gmail.com Website : www.tcbl.co.in

## 2019-2020ನೇ ಸಾಲಿನ 57ನೇ ಸಾಮಾನ್ಯ ಸರ್ವಸದಸ್ಯರ ವಾರ್ಷಿಕ ಸಭೆ

ದಿನಾಂಕ : 21–12–2020ನೇ ಸೋಮವಾರ
ಬೆಳಿಗ್ಗೆ 10–30 ಘಂಟೆಗೆ
ವರ್ಚುಯಲ್/ವಿಡಿಯೋ ಕಾನ್ಫರೆನ್ಸ್ ಮೂಲಕ

(31–03–2020 ಕ್ಕೆ ಬಂಡವಾಳ ಪ್ರಮಾಣ ಶೇ. 17.68%)
(CAPITAL ADEQUACY RATIO 17.68%)

**ಸಾಮಾನ್ಯ ಸದಸ್ಯರಿಗೆ ವಿಶೇಷ ಸೂಚನೆ** (ಹಳದಿ ಬಣ್ಣದ ಗುರುತಿನ ಚೀಟಿ ಹೊಂದಿರುವವರಿಗೆ ಮಾತ್ರ)

**ವರ್ಚುಯಲ್ ಸಭೆಯಲ್ಲಿ ಭಾಗವಹಿಸಲು ಸದಸ್ಯರು ಈ ಕೆಳಕಂಡ ಲಿಂಕ್ ಅಥವಾ QR ಕೋಡ್ ಬಳಸುವುದು.**

**https://viewnow.in:81/Textile_co_operative_Bank/AGM**

OR

QR CODE

| | |
|---|---|
| ಸದಸ್ಯತ್ವದ ಸಂಖ್ಯೆ | Membership No. |
| ಹೆಸರು | Name |
| ಸಲ್ಲಿಸು | Submit |

## ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಲು ಸದಸ್ಯರು ಅನುಸರಿಸಬೇಕಾದ ವಿಧಾನ / Steps to join Video Conference

| | |
|---|---|
| ವಿಡಿಯೋ ಕಾನ್ಫರೆನ್ಸ್ ಲಿಂಕ್‌ಅನ್ನು ಕ್ಲಿಕ್ ಮಾಡುವುದು | Click on Video Conference link to join two way Communication |
| ಜೂಮ್ ಆಪ್ ಅನ್ನು ಕ್ಲಿಕ್ ಮಾಡುವ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವುದು | Download Zoom application by clicking on Download from Zoom |
| ಜೂಮ್ ಆಪ್ ತೆರೆಯಲು ಜೂಮ್ ಆಪ್ ತೆರೆಯುವ ಕಿಂಡಿಯನ್ನು ಕ್ಲಿಕ್ ಮಾಡುವುದು | Click open with Zoom |
| ಕಾಲ್ ಓವರ್ ಇಂಟರ್‌ನೆಟ್ ಕೀ ಅನ್ನು ಕ್ಲಿಕ್ ಮಾಡುವುದು (ಆಡಿಯೋ/ವಿಡಿಯೋ ಸ್ಥಗಿತಗೊಳಿಸಲು–ಅವಶ್ಯವಿದ್ದಲ್ಲಿ) | Click-Call Over Internet (Mute Video/Audio as needed) |
| ಪ್ರಶ್ನೆ ಕೇಳಲು ಮೋರ್‌ಆನ್ ಕೀ ಅನ್ನು ಬಳಸಿ ಕೈ ಎತ್ತುವ ಚಿಹ್ನೆ ಬಳಸುವುದು. | Click on more button to ask question - Use Hand Raise option. |

ಹೆಚ್ಚಿನ ಮಾಹಿತಿಯನ್ನು ಬ್ಯಾಂಕಿನ ವೆಬ್‌ಸೈಟ್ www.tcbl.co.inನಿಂದ ಪಡೆಯಬಹುದು
For more information visit Bank Website www.tcbl.co.in

# ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.

## 2017–18 ರಿಂದ 2022–23 ರ ಸಾಲಿನ ನಿರ್ದೇಶಕ ಮಂಡಳಿ



ಶ್ರೀ ಕೃ. ಅಶ್ವತ್ಥನಾರಾಯಣರವರು
ಅಧ್ಯಕ್ಷರು



ಶ್ರೀ ಟಿ. ಭಾಸ್ಕರ್ (ಟಿ.ಟಿ.)ರವರು
ಉಪಾಧ್ಯಕ್ಷರು



ಶ್ರೀ ಟಿ.ಎಸ್. ಕೃಷ್ಣಮೂರ್ತಿ (ಜರಿಕೃಷ್ಣ)ರವರು
ನಿರ್ದೇಶಕರು



ಶ್ರೀ ಆರ್. ಭಾಸ್ಕರ್ (ಗಿಣಿ)ರವರು
ನಿರ್ದೇಶಕರು



ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ(ವೈ.ವಿ.ರಾಜು)ರವರು
ನಿರ್ದೇಶಕರು



ಶ್ರೀ ಎಸ್. ಉಮಾಶಂಕರ್‌ರವರು
ನಿರ್ದೇಶಕರು



ಶ್ರೀ ಕುಲಾವಿ ಆರ್. ಮಲ್ಲಣ್ಣರವರು
ನಿರ್ದೇಶಕರು



ಶ್ರೀ ಊರುಕೆರೆ ಜಿ. ದಯಾನಂದರವರು
ನಿರ್ದೇಶಕರು



ಶ್ರೀ ಮಾಧವರವರು
ನಿರ್ದೇಶಕರು



ಶ್ರೀಮತಿ ಹೆಚ್. ಪಾರ್ವತಿ (ರಂಗನಾಯಕಿ)ರವರು
ಮಹಿಳಾ ನಿರ್ದೇಶಕರು



ಶ್ರೀಮತಿ ದೇವಕಿ ಆರ್.ರವರು
ಮಹಿಳಾ ನಿರ್ದೇಶಕರು



ಶ್ರೀ ಡಿ. ಹೆಚ್. ಜಗನ್ನಾಥ್ (ದೊಮ್ಮಸಂದ್ರ)ರವರು
ನಿರ್ದೇಶಕರು



ಶ್ರೀ ದೇವರಾಜು ಪಿ.ರವರು
ಹಿಂದುಳಿದ ವರ್ಗದ ನಿರ್ದೇಶಕರು



ಶ್ರೀ ಪಿ. ಎಂ. ನಾಗರಾಜುರವರು
ಪರಿಶಿಷ್ಟ ಪಂಗಡ ನಿರ್ದೇಶಕರು



ಶ್ರೀ ಶಾಂತರಾಜುರವರು
ಬ್ಯಾಂಕಿಂಗ್ ಪರಿಣಿತರು



ಶ್ರೀ ಜಿ. ಶಿವಕುಮಾರ್‌ರವರು
ಚಾರ್ಟರ್ಡ್ ಅಕೌಂಟೆಂಟ್



ಶ್ರೀ ಡಿ. ಸಂಜೀವಣ್ಣರವರು
ಮುಖ್ಯ ಕಾರ್ಯನಿರ್ವಾಹಕರು (ಪ್ರ)

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು-560 002.

## 2019–20ನೇ ಸಾಲಿನ 57ನೇ ಸಾಮಾನ್ಯ ಸರ್ವ ಸದಸ್ಯರ ವಾರ್ಷಿಕ ಸಭೆಯ ನೋಟೀಸು.

2019–20 ನೇ ಸಾಲಿನ 57ನೇ ಸರ್ವ ಸದಸ್ಯರ ವಾರ್ಷಿಕ ಸಭೆಯನ್ನು ದಿನಾಂಕ: 21–12–2020 ರಂದು ಸೋಮವಾರ ಬೆಳಿಗ್ಗೆ 10.30 ಘಂಟೆಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೃ. ಅಶ್ವತ್ಥನಾರಾಯಣರವರ ಅಧ್ಯಕ್ಷತೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ವರ್ಚುಯಲ್ / ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಪಾಲ್ಗೊಂಡು ಕಾರ್ಯ ಕಲಾಪಗಳನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

### ಕಾರ್ಯಸೂಚಿ

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸಭೆಯ ನೋಟೀಸನ್ನು ಓದಿ ರೆಕಾರ್ಡ್ ಮಾಡುವುದು. (ನಿ.ಮ.ವ.ಪು : 01)
4. 2018–19ನೇ ಸಾಲಿನ ಸರ್ವ ಸದಸ್ಯರ ಸಭೆಯ ಕಲಾಪಗಳನ್ನು ಓದಿ ಖಾಯಂ ಮಾಡುವುದು. (ಆ.ವ.ಪು : 02–22)
5. 2019–20ನೇ ಸಾಲಿನ ನಿರ್ದೇಶಕ ಮಂಡಳಿ ವರದಿ ಅಂಗೀಕರಿಸುವುದು. (ನಿ.ಮ.ವ.ಪು : 06–15)
6. 2019–20ನೇ ಸಾಲಿನ ಲೆಕ್ಕ ಪರಿಶೋಧನೆಯಾದ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅನುಮೋದನೆ ಹಾಗೂ ಲೆಕ್ಕ ಪರಿಶೋಧನಾ ವರದಿ ಮತ್ತು ವರದಿಗೆ ನಿರ್ದೇಶಕ ಮಂಡಳಿಯವರು ನೀಡಿರುವ ಸಮಾಧಾನಗಳನ್ನು ಪರಿಶೀಲಿಸಿ ಅಂಗೀಕರಿಸುವುದು. (ಆ.ವ.ಪು : 23–102)
7. 2019–20ನೇ ಸಾಲಿನಲ್ಲಿ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ. (ನಿ.ಮ.ವ.ಪು : 16)
8. 2019–20ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು. (ನಿ.ಮ.ವ.ಪು : 17)
9. 2020–21ನೇ ಸಾಲಿಗೆ ಬಡ್ಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು. (ನಿ.ಮ.ವ.ಪು : 18–19)

10. 2020–21ನೇ ಸಾಲಿಗೆ ಲೆಕ್ಕ ಪರಿಶೋಧನೆಗೆ, ಲೆಕ್ಕ ಪರಿಶೋಧಕರನ್ನು ನೇಮಿಸುವುದು ಹಾಗೂ ಅವರುಗಳ ಸಂಭಾವನೆ ನಿಗಧಿಪಡಿಸುವುದು. (ನಿ.ಮ.ವ.ಪು : 19)

11. ಬ್ಯಾಂಕಿನ ಮುಂಬರುವ ವರ್ಷದ ಕಾರ್ಯ ಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ. (ನಿ.ಮ.ವ.ಪು : 19–20)

12. ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ. (ನಿ.ಮ.ವ.ಪು : 20)

13. ನಿರ್ದೇಶಕರುಗಳಿಗೆ ಅವರ ಹತ್ತಿರದ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರೂ ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ. (ನಿ.ಮ.ವ.ಪು : 20)

14. ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು. (ನಿ.ಮ.ವ.ಪು : 21)

15. ಬ್ಯಾಂಕಿನ ಉಪ ನಿಯಮಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದನ್ವಯ ಮಾಡಬೇಕಾದ ತಿದ್ದುಪಡಿಗಳ ಅನುಮೋದನೆ (ನಿ.ಮ.ವ.ಪು : 22–28)

16. ಅಧ್ಯಕ್ಷರ ಅಪ್ಪಣೆ ಮೇರೆಗೆ ಸದಸ್ಯರಿಂದ ಬರಬಹುದಾದ ನಿರ್ಣಯಗಳು ಮತ್ತು ಸೂಚಿಸಬಹುದಾದ ವಿಷಯಗಳು.

17. ವಂದನಾರ್ಪಣೆ.

**ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ**

**ಸಹಿ/–**

**ಬೆಂಗಳೂರು** **ಡಿ. ಸಂಜೀವಣ್ಣ**

**ತಾ: 26/11/2020** ಮುಖ್ಯ ಕಾರ್ಯನಿರ್ವಾಹಕರು (ಪ್ರ).

**ಸೂಚನೆ: 1. ನಿ.ಮ.ವ.ಪು – ನಿರ್ದೇಶಕ ಮಂಡಳಿ ವರದಿ ಪುಟ ಸಂಖ್ಯೆ.**
**ಆ.ವ.ಪು – ಆಡಿಟ್ ವರದಿ ಪುಟ ಸಂಖ್ಯೆ.**

**2. ಕಾರ್ಯಸೂಚಿ ಅನ್ವಯ ಯಾರೇ ಸದಸ್ಯರು ಸಭೆಯಲ್ಲಿ ಭಾಗವಹಿಸಿ ವಿಷಯದ ಬಗ್ಗೆ ಚರ್ಚಿಸಲು ಇಚ್ಛಿಸಿದಲ್ಲಿ ಆ ಬಗ್ಗೆ ಲಿಖಿತ ಮೂಲಕ ನಮ್ಮ ಬ್ಯಾಂಕಿನ ಪ್ರಧಾನ ಕಛೇರಿಗೆ ಮುಂಚಿತವಾಗಿ ಅಂದರೆ 7 ದಿನಗಳೊಳಗೆ ತಿಳಿಸಿ ಅವರ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು. ಇಂತಹ ಸೂಚನೆ ನಮ್ಮ ಕಛೇರಿಗೆ ದಿ. 14.12.2020 ಒಳಗೆ ನೀಡತಕ್ಕದ್ದು.**

## ಸದಸ್ಯರುಗಳಿಗೆ ವಿಶೇಷ ಸೂಚನೆ

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಕಾಯಿದೆ 2014 (ಅಧಿನಿಯಮ 35) ಮತ್ತು (ತಿದ್ದುಪಡಿ) ನಿಯಮ, 2015ರ ಪ್ರಕಾರ ಈ ಕೆಳಕಂಡ ಸದಸ್ಯರುಗಳಿಗೆ ಮಹಾ ಸಭೆಯ ನಡಾವಳಿಗಳಲ್ಲಿ ಪಾಲ್ಗೊಳ್ಳುವ ಮತ್ತು ಯಾವುದೇ ವಿಷಯಕ್ಕೆ ಮತ ಹಾಕುವ ಹಕ್ಕಿರುವುದಿಲ್ಲ.

1. ಸುಸ್ತಿ ಸಾಲಗಾರ ಸದಸ್ಯರುಗಳಿಗೆ.
2. ಹಿಂದಿನ ಸತತ ಐದು ವಾರ್ಷಿಕ ಸರ್ವ ಸದಸ್ಯರ ಸಭೆಗಳಲ್ಲಿ ಕನಿಷ್ಟ 3 ಸಭೆಗಳಿಗೆ ಹಾಜರಾಗದೆ ಇರುವ ಸದಸ್ಯರುಗಳಿಗೆ.
3. ಹಿಂದಿನ ವರ್ಷದಲ್ಲಿ ಕನಿಷ್ಠ ವ್ಯವಹಾರವನ್ನು ನಡೆಸಲು ಅಥವಾ ಬ್ಯಾಂಕು ನೀಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪಡೆಯಲು ವಿಫಲರಾದ ಸದಸ್ಯರುಗಳು.

## ಸದಸ್ಯರ ಗಮನಕ್ಕೆ

1. ಬೈಲಾ ನಂ.45ರ ಪ್ರಕಾರ ಬ್ಯಾಂಕಿಗೆ ಸಂಬಂಧಪಟ್ಟ ಬೇರಾವುದೇ ವಿಷಯದಲ್ಲಿ ಹೆಚ್ಚಿನ ಸಮಜಾಯಿಷಿ ಅಥವಾ ವಿವರಗಳು ಬೇಕೆಂದು ಬಯಸಿದರೆ ಸಂಬಂಧಪಟ್ಟ ಸುಸ್ತಿದಾರರಲ್ಲದ ಸದಸ್ಯರು ಕಡೇ ಪಕ್ಷ 7 ದಿನಗಳ ಮುಂಚೆಯಾದರೂ ಅಂದರೆ ದಿನಾಂಕ: 14.12.2020 ರೊಳಗಾಗಿ ದಯವಿಟ್ಟು ಬ್ಯಾಂಕಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.
2. ಷೇರು ಖಾತೆಯಲ್ಲಿ ಸಹಿ ಹಾಕದಿರುವವರು ಸಹಿ ಹಾಕತಕ್ಕದ್ದು ಮತ್ತು ನಾಮಿನೇಷನ್ ಸೂಚನೆ ಮಾಡದೇ ಇರತಕ್ಕವರು ತಮ್ಮ ಹಿತದೃಷ್ಟಿಯಿಂದ ನಾಮಿನಿಯ ಹೆಸರನ್ನು ಸೂಚಿಸತಕ್ಕದ್ದು. ಷೇರು ಸರ್ಟಿಫಿಕೇಟುಗಳನ್ನು ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ತೆಗೆದುಕೊಳ್ಳುವುದು.
3. ದಿನಾಂಕ: 27.09.1991 ರಂದು ನಡೆದ ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನವಾದಂತೆ ಆಡಿಟ್ ಆದ ಲೆಕ್ಕ ಪತ್ರಗಳ ಜಮಾ–ಖರ್ಚು ತಃಖ್ತೆ, ಆಸ್ತಿ–ಜವಾಬ್ದಾರಿ ತಃಖ್ತೆ, ಲಾಭ–ನಷ್ಟದ ತಃಖ್ತೆ, ಆಡಿಟ್‌ರವರ ವರದಿ ಹಾಗೂ ವರದಿಗೆ ನೀಡಿರುವ ಸಮಾಜಾಯಿಷಿಗಳ ಪ್ರತಿಯನ್ನು ಇಚ್ಛಿಸುವ ಸದಸ್ಯರು ಬ್ಯಾಂಕಿನಲ್ಲೇ ದಿನಾಂಕ: 06.12.2020ರಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದು.
4. ಸಭೆಯಲ್ಲಿ ಭಾಗವಹಿಸಲು ಸದಸ್ಯರಿಗೆ ನೀಡಿರುವ ಲಿಂಕ್ ಬಳಸಿ ಆನ್–ಲೈನ್ ಮೂಲಕ ಲಾಗ್–ಇನ್ ಆಗಿ ತಪ್ಪದೇ ಹಾಜರಾತಿಯನ್ನು ದಾಖಲಿಸುವುದು.
5. ಗುರುತಿನ ಚೀಟಿಯನ್ನು ಪಡೆಯದಿರುವ ಸದಸ್ಯರು ತಮ್ಮ ಭಾವಚಿತ್ರವನ್ನು ಕೂಡಲೇ ಬ್ಯಾಂಕಿಗೆ ನೀಡಿ ಪಡೆಯಬಹುದು ಹಾಗೂ ವಿಳಾಸ ಬದಲಾವಣೆಯಾಗಿದ್ದರೆ ತಕ್ಷಣ ಬ್ಯಾಂಕಿಗೆ ತಿಳಿಸುವುದು.
6. ಹಿಂದಿನ ಸಾಲುಗಳ ಡಿವಿಡೆಂಡನ್ನು ಇನ್ನೂ ತೆಗೆದುಕೊಳ್ಳದೆ ಇರುವ ಸದಸ್ಯರು ದಯವಿಟ್ಟು ತೆಗೆದುಕೊಳ್ಳುವುದು. ಇಲ್ಲದಿದ್ದರೆ ಈ ಮೊದಲೇ ತಿಳಿಸಿರುವಂತೆ ಬೈಲಾ ಸಂಖ್ಯೆ 103ರ ಪ್ರಕಾರ ಪಾವತಿಯಾಗದ ಡಿವಿಡೆಂಡನ್ನು ಆಪದ್ಧನ ನಿಧಿಗೆ ವರ್ಗಾಯಿಸುವುದು.

7. ಸದಸ್ಯರುಗಳು ಉಳಿತಾಯ/ಚಾಲ್ತಿ ಖಾತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಇದು ಸಂವಿಧಾನದ ತಿದ್ದುಪಡಿ ಕಾಯಿದೆ ಪ್ರಕಾರವು ಕಡ್ಡಾಯವಾಗಿರುತ್ತದೆ. ಹಾಗೂ ತಮ್ಮ ಸದಸ್ಯತ್ವದ ಡಿವಿಡೆಂಡ್‌ನ್ನು ವರ್ಗಾಯಿಸಲು ಅನುಕೂಲವಾಗುವುದು.

8. ಬ್ಯಾಂಕಿನ ಸುವರ್ಣ ಮಹೋತ್ಸವದ ನೆನಪಿಗಾಗಿ ಸದಸ್ಯರುಗಳಿಗೆ ಬೆಳ್ಳಿ ನಾಣ್ಯವನ್ನು ಈಗಲೂ ಸಹ ನೀಡುತ್ತಿದ್ದು, ಇನ್ನೂ ಪಡೆಯದೆ ಇರುವ ಸದಸ್ಯರು ಗುರುತಿನ ಚೀಟಿಯ ನಕಲನ್ನು ನೀಡಿ ಬ್ಯಾಂಕಿನ ಮಧ್ಯಾಹ್ನದ ವ್ಯವಹಾರದ ವೇಳೆಯಲ್ಲಿ ಪಡೆದುಕೊಳ್ಳುವುದು.

**9. ಸದಸ್ಯರುಗಳ ಹೆಸರಿನಲ್ಲಿರುವ ಗಡು ಠೇವಣಿ, ಮಂಗಳನಿಧಿ ಠೇವಣಿ ಹಾಗೂ ಆವರ್ತಕ ಠೇವಣಿ (Recurring) ಗಳಿಂದ ಕ್ರೋಢೀಕೃತವಾಗಿ ಗಳಿಸುವ ಬಡ್ಡಿ ಮೊತ್ತ ಒಂದು ವರ್ಷದಲ್ಲಿ ರೂ. 40,000/– ಹಾಗೂ ಹಿರಿಯ ನಾಗರಿಕರು ರೂ. 50,000/–ಗಳು ಅಥವಾ ಅದಕ್ಕೂ ಮೇಲ್ಪಟ್ಟು ಗಳಿಸಿದಾಗ ಕಡ್ಡಾಯವಾಗಿ ಟಿ.ಡಿ.ಎಸ್. ಕಟಾವು ದಿನಾಂಕ: 01.04.2019 ರಿಂದ ಮಾಡಬೇಕಾಗಿರುತ್ತದೆ. ಇದಕ್ಕೆ ಠೇವಣಿದಾರರ ಪಾನ್ ಸಂಖ್ಯೆ ಅಗತ್ಯವಾಗಿರುತ್ತದೆ. ಪಾನ್ ಇಲ್ಲದಿದ್ದ ಪಕ್ಷದಲ್ಲಿ ಶೇ.20 ರಂತೆ ಟಿ.ಡಿ.ಎಸ್. ಕಟಾವು ಮಾಡಬೇಕಾಗಿರುತ್ತದೆಂದು ಆದಾಯ ತೆರಿಗೆ ಇಲಾಖೆಯವರು ಆದೇಶಿಸಿರುತ್ತಾರೆ.**

**10. (DEAF) ಡಿಪಾಸಿಟ್ ಎಜುಕೇಷನ್ ಅವೇರ್‌ನೆಸ್ ಫಂಡ್.**

**ಗ್ರಾಹಕರುಗಳು ಬ್ಯಾಂಕಿನಲ್ಲಿ ಹೊಂದಿರುವ ಯಾವುದೇ ಠೇವಣಿ ಖಾತೆಗಳಲ್ಲಿ ಅಥವಾ ವಾಯಿದೆ ಮುಗಿದು 10 ವರ್ಷಗಳ ಕಾಲ ವ್ಯವಹರಿಸದ ಖಾತೆಗಳಲ್ಲಿನ ಹಣವನ್ನು ಕಡ್ಡಾಯವಾಗಿ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯ ಪ್ರಕಾರ ಅವರಿಗೆ ಕಳುಹಿಸಬೇಕಾಗಿರುತ್ತದೆ. ಇದಕ್ಕೆ ಅವಕಾಶ ನೀಡದಂತೆ ನಿಗಾ ವಹಿಸಲು ಸದಸ್ಯರುಗಳ ಗಮನಕ್ಕೆ ತರುತ್ತಿದ್ದೇವೆ.**

11. ಭಾರತೀಯ ರಿಸರ್ವ್ ಬ್ಯಾಂಕಿನ ನಿಮ್ಮ ಗ್ರಾಹಕರನ್ನು ಅರಿಯಿರಿ ಎಂಬ ಸುತ್ತೋಲೆಯಲ್ಲಿ ತಿಳಿಸಿರುವಂತೆ ಬ್ಯಾಂಕಿನಲ್ಲಿ ಉಳಿತಾಯ/ಚಾಲ್ತಿ, ಇತರೇ ಖಾತೆಗಳನ್ನು ತೆರೆಯಲು ಇಚ್ಛಿಸುವ ಗ್ರಾಹಕರು ತಮ್ಮ ಪಾಸ್‌ಪೋರ್ಟ್/ಪ್ಯಾನ್ ಕಾರ್ಡ್/ವಾಹನ ಚಾಲನೆ ಅನುಮತಿ ಪತ್ರ/ಚುನಾವಣೆ ಆಯೋಗದ ಗುರುತಿನ ಚೀಟಿ/ಆಧಾರ್ ಕಾರ್ಡು ಇಂತಹವುಗಳನ್ನು ಅವರ ಭಾವಚಿತ್ರದೊಂದಿಗೆ ಕಡ್ಡಾಯವಾಗಿ ನೀಡಬೇಕು. ಈ ಮಾಹಿತಿಯನ್ನು ನೀಡಿ ತಮ್ಮ ಖಾತೆಯಲ್ಲಿನ ವಿವರಗಳನ್ನು ಪೂರ್ಣಗೊಳಿಸುವುದು.

12. ಈ ಸುತ್ತೋಲೆಯಲ್ಲಿನ ಕಾಯಿದೆಯು ಈಗಾಗಲೇ ಹೊಂದಿರುವ ಹಳೆಯ ಖಾತೆದಾರರಿಗೂ ಅನ್ವಯವಾಗುತ್ತದೆ. ಆದ್ದರಿಂದ ಮೇಲ್ಕಂಡ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಹಳೆಯ ಖಾತೆದಾರರೂ ಸಹ ಬ್ಯಾಂಕಿಗೆ ಸಲ್ಲಿಸಿ ತಮ್ಮ ಖಾತೆಗಳನ್ನು ಕ್ರಮಗೊಳಿಸಬೇಕಾಗಿ ಕೋರುತ್ತೇವೆ.

13. ಉಳಿತಾಯ / ಚಾಲ್ತಿ ಖಾತೆ ಹೊಂದಿರುವ ಖಾತೆದಾರರು ತಮ್ಮ ಆಧಾರ್ ಸಂಖ್ಯೆಯನ್ನು ಖಾತೆಗಳಿಗೆ ಜೋಡಣೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಜೋಡಣೆ ಮಾಡದ ಖಾತೆದಾರರು ಕೂಡಲೇ ತಮ್ಮ ಆಧಾರ್ ಸಂಖ್ಯೆಯನ್ನು ತಮ್ಮ ಖಾತೆಗಳಲ್ಲಿ ಜೋಡಣೆ ಮಾಡುವುದು.

# ಟೆಕ್ಸ್‌ಟೈಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.**

## 2019–20ನೇ ಸಾಲಿನ ನಿರ್ದೇಶಕ ಮಂಡಳಿ ಸದಸ್ಯರು

| | | |
|---|---|---|
| 1. | ಶ್ರೀ. ಡಿ. ಹೆಚ್. ಜಗನ್ನಾಥ್‌ರವರು (ದೊಮ್ಮಸಂದ್ರ) | ಅಧ್ಯಕ್ಷರು |
| 2. | ಶ್ರೀ. ಟಿ. ಭಾಸ್ಕರ್‌ರವರು (ಟಿ.ಟಿ) | ಉಪಾಧ್ಯಕ್ಷರು |
| 3. | ಶ್ರೀ. ಟಿ. ಎಸ್. ಕೃಷ್ಣಮೂರ್ತಿರವರು (ಜರಿಕೃಷ್ಣ) | ನಿರ್ದೇಶಕರು |
| 4. | ಶ್ರೀ. ಆರ್. ಭಾಸ್ಕರ್‌ರವರು (ಗಿಣಿ) | ನಿರ್ದೇಶಕರು |
| 5. | ಶ್ರೀ. ಎಣ್ಣೆಗೆರೆ ಆರ್. ವೆಂಕಟರಾಮಯ್ಯರವರು (ವೈ. ವಿ. ರಾಜು) | ನಿರ್ದೇಶಕರು |
| 6. | ಶ್ರೀ. ಎಸ್. ಉಮಾಶಂಕರ್‌ರವರು | ನಿರ್ದೇಶಕರು |
| 7. | ಶ್ರೀ. ಕುಲಾವಿ ಆರ್. ಮಲ್ಲಣ್ಣರವರು | ನಿರ್ದೇಶಕರು |
| 8. | ಶ್ರೀ. ಊರುಕೆರೆ ಜಿ. ದಯಾನಂದರವರು | ನಿರ್ದೇಶಕರು |
| 9. | ಶ್ರೀ. ಕೃ. ಅಶ್ವತ್ಥನಾರಾಯಣರವರು | ನಿರ್ದೇಶಕರು |
| 10. | ಶ್ರೀ. ಮಾಧವರವರು | ನಿರ್ದೇಶಕರು |
| 11. | ಶ್ರೀಮತಿ. ಹೆಚ್. ಪಾರ್ವತಿರವರು (ರಂಗನಾಯಕಿ) | ಮಹಿಳಾ ನಿರ್ದೇಶಕರು |
| 12. | ಶ್ರೀಮತಿ ಆರ್. ದೇವಕಿರವರು | ಮಹಿಳಾ ನಿರ್ದೇಶಕರು |
| 13. | ಶ್ರೀ. ಪಿ. ದೇವರಾಜುರವರು | ನಿರ್ದೇಶಕರು (ಹಿಂ. ವರ್ಗ) |
| 14. | ಶ್ರೀ. ಪಿ. ಎಂ. ನಾಗರಾಜುರವರು | ನಿರ್ದೇಶಕರು (ಪ.ಜಾ/ಪ.ಪಂ) |
| 15. | ಶ್ರೀ. ಶಾಂತರಾಜುರವರು (ಬ್ಯಾಂಕಿಂಗ್ ಪರಿಣಿತರು) | ನಿರ್ದೇಶಕರು |
| 16. | ಶ್ರೀ. ಜಿ. ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್) | ನಿರ್ದೇಶಕರು |

## 2019–20ನೇ ಸಾಲಿನಲ್ಲಿ ನಡೆದ ನಿರ್ದೇಶಕ ಮಂಡಳಿಯ ಒಟ್ಟು ಸಭೆಗಳು – 17

### ಹಾಜರಾತಿ ವಿವರ

| | | | |
|---|---|---|---|
| 1. | ಶ್ರೀ. ಡಿ. ಹೆಚ್. ಜಗನ್ನಾಥ್‌ರವರು | – | 17 |
| 2. | ಶ್ರೀ. ಟಿ. ಭಾಸ್ಕರ್‌ರವರು | – | 15 |
| 3. | ಶ್ರೀ. ಟಿ. ಎಸ್. ಕೃಷ್ಣಮೂರ್ತಿರವರು | – | 15 |
| 4. | ಶ್ರೀ. ಆರ್. ಭಾಸ್ಕರ್‌ರವರು | – | 14 |
| 5. | ಶ್ರೀ. ಎಣ್ಣೆಗೆರೆ ಆರ್. ವೆಂಕಟರಾಮಯ್ಯರವರು (ವೈ. ವಿ. ರಾಜು) | – | 12 |
| 6. | ಶ್ರೀ. ಎಸ್. ಉಮಾಶಂಕರ್‌ರವರು | – | 17 |
| 7. | ಶ್ರೀ. ಕುಲಾವಿ ಆರ್. ಮಲ್ಲಣ್ಣರವರು | – | 16 |
| 8. | ಶ್ರೀ. ಊರುಕೆರೆ ಜಿ. ದಯಾನಂದರವರು | – | 17 |
| 9. | ಶ್ರೀ. ಕೃ. ಅಶ್ವತ್ಥನಾರಾಯಣರವರು | – | 17 |
| 10. | ಶ್ರೀ. ಮಾಧವರವರು | – | 17 |
| 11. | ಶ್ರೀಮತಿ. ಹೆಚ್. ಪಾರ್ವತಿರವರು (ರಂಗನಾಯಕಿ) | – | 16 |
| 12. | ಶ್ರೀಮತಿ ಆರ್. ದೇವಕಿರವರು | – | 16 |
| 13. | ಶ್ರೀ. ಪಿ. ದೇವರಾಜುರವರು | – | 16 |
| 14. | ಶ್ರೀ. ಪಿ. ಎಂ. ನಾಗರಾಜುರವರು (ಪ.ಜಾ/ಪ.ಪಂ) | – | 12 |
| 15. | ಶ್ರೀ. ಶಾಂತರಾಜುರವರು (ಬ್ಯಾಂಕಿಂಗ್ ಪರಿಣಿತರು) | – | 16 |
| 16. | ಶ್ರೀ. ಜಿ. ಶಿವಕುಮಾರ್‌ರವರು (ಚಾರ್ಟರ್ಡ್ ಅಕೌಂಟೆಂಟ್) | – | 13 |

# ಟೆಕ್ಸ್‌ಟೈಲ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ: 2ನೇ ಮಹಡಿ, ದೇವಾಂಗ ಮಾರ್ಕೆಟ್, ಜುಮ್ಮಾ ಮಸೀದಿ ರಸ್ತೆ, ಬೆಂಗಳೂರು – 560 002.**

## 2019– 2020ನೇ ಸಾಲಿನ ನಿರ್ದೇಶಕ ಮಂಡಳಿ ವರದಿ

ಮಾನ್ಯ ಸದಸ್ಯರೇ,

ನಮ್ಮ ಬ್ಯಾಂಕಿನ ಐವತ್ತೇಳನೆಯ ವಾರ್ಷಿಕ ಸಾಮಾನ್ಯ ಸರ್ವ ಸದಸ್ಯರ ಸಭೆಗೆ ಆಗಮಿಸಿರುವ ತಮ್ಮೆಲ್ಲರನ್ನು ಬ್ಯಾಂಕಿನ ನಿರ್ದೇಶಕ ಮಂಡಳಿಯು ಹಾರ್ದಿಕವಾಗಿ ಸ್ವಾಗತಿಸುತ್ತದೆ.

ವರದಿ ಸಾಲಿನಲ್ಲಿ ಮೃತರಾದ ಈ ಕೆಳಕಂಡ ಬ್ಯಾಂಕಿನ ಸದಸ್ಯರ ಆತ್ಮಕ್ಕೆ ಶಾಂತಿ ಲಭಿಸಲೆಂದು ಹಾಗೂ ಮೃತರ ಅಗಲಿಕೆಯಿಂದಾದ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.

ಬ್ಯಾಂಕಿನ ಸದಸ್ಯರುಗಳಾದ ಎಸ್.ಕೃಷ್ಣ, ಸಿ.ಹನುಮಂತಪ್ಪ, ಎಲ್.ಎಂ.ಎಸ್.ಚೂಡಾರಾಜ್, ಆರ್.ರಂಗನಾಯಕಿ, ಎ.ಸಿ.ಕೃಷ್ಣಮೂರ್ತಿ, ನಾಗರತ್ನ, ಬಿ.ಪಿ.ಬಾಬು, ಟಿ.ಎನ್.ಲೋಕೇಶ್, ಆರ್.ಲೀಲಾವತಿ, ಎಸ್.ವಿಮಲಮ್ಮ, ಕೆ.ಪರಮೇಶ್ವರಪ್ಪ, ಎಲ್.ಬಸಮ್ಮ, ಜಿ.ಬಾಳಯ್ಯ, ಸಾವಿತ್ರಮ್ಮ, ಭಾಗ್ಯಮ್ಮ, ಪಿ.ದೇವರಾಜು, ವಿಜಯಲಕ್ಷ್ಮಿ, ಪಾರ್ವತಮ್ಮ, ಕಮಲಮ್ಮ, ಎಸ್.ಎನ್.ನಾರಾಯಣ, ಜೆ.ಎಸ್.ಜಗದೀಶ್, ಆರ್.ಎಸ್.ದಯಾನಂದ ಶೆಟ್ಟಿ, ಪಿ.ಮೋಹನ್, ಕಮಲಮ್ಮ, ಆರ್.ಸುಬ್ರಮಣ್ಯಂ, ಸರಸ್ವತಮ್ಮ, ಜ್ಞಾನಮೂರ್ತಿ, ಹೆಚ್.ಕೆ.ಕಾಂತರಾಜು, ಆರ್.ಲಕ್ಷ್ಮಮ್ಮ, ಡಿ.ಬಿ.ದಿನೇಶ್, ಎನ್.ಎಸ್.ಅನುಸೂಯಮ್ಮ, ಬಿ.ವಿ.ಉಮಾ, ಎಸ್.ಸುನಂದಮ್ಮ, ಆರ್.ರಾಮಚಂದ್ರ, ಆರ್.ಪ್ರಕಾಶ್, ಮುನ್ನುಬಾಯಿ, ಗಂಟೆ ಮೋಹನ್, ಪಿ.ಉಮೇಶ್, ವಿ.ಕಾಂತರಾಜು, ವಿ.ಶ್ರೀನಿವಾಸ್, ಸಿ.ಆರ್.ಕೃಷ್ಣಮೂರ್ತಿ, ಎನ್.ಎಸ್.ದಾಸಪ್ಪ, ಬಿ.ಆರ್.ಹನುಮಂತಪ್ಪ, ಟಿ.ಪುಷ್ಪ, ಪಿ.ಲಕ್ಷ್ಮಿದೇವಿ, ಹೆಚ್.ಎಲ್.ನಾರಾಯಣ, ಆರ್.ನಾಗರಾಜು, ಗಾಯತ್ರಿ, ಸಿ.ವಿ.ರಮೇಶ್, ಪಿ.ಶಂಕರಪ್ಪ, ರಂಗಧಾಮ, ಡಿ.ನಾಗರಾಜ್, ಎಂ.ಎ.ಅಭಿರಾಮಿದೇವಿ, ಎಸ್.ಶೈಲಜಾ, ಸುಲೋಚನಾ, ಜಿ.ಬಾಲರಾಜು, ಯಶೋಧ, ಬಿ.ಸಿ.ಹರೀಶ್, ಹೆಚ್.ರಂಗಸ್ವಾಮಿ, ಆರ್.ಲಕ್ಷ್ಮಮ್ಮ, ವಿ.ಚಂದ್ರಶೇಖರ್, ಸಿ.ನಾರಾಯಣನ್, ಆರ್.ಸೋಮಶೇಖರ್, ಹೆಚ್.ಪ್ರಕಾಶ್, ಸುಶೀಲಮ್ಮ, ಬಿ.ರಾಜಶೇಖರ್, ಎನ್.ಹನುಮಂತಪ್ಪ, ಎಂ.ವಿ.ಗಿರಿಯಪ್ಪ, ಆರ್.ವಿಜಯಕುಮಾರ್, ಬಿ.ಹನುಮಂತಪ್ಪ, ಕೆ.ಲಕ್ಷ್ಮಣ್, ಎಂ.ತ್ಯಾಗರಾಜ್, ಸಿ.ಕೃಷ್ಣಪ್ಪ, ವಿ.ವೇಣುಗೋಪಾಲ್, ಕೆ.ಎ.ಪುಷ್ಪಲತಾ, ಎಂ.ವಿ.ಪದ್ಮನಾಭಮ್, ಎಂ.ವೆಂಕಟಾಚಲಯ್ಯ, ಆರ್.ರಂಗನಾಥ್, ಕೆ.ಯಶೋಧಮ್ಮ, ರತ್ನಮ್ಮ, ಟಿ.ಮುನಿಸ್ವಾಮಿ, ಹೆಚ್.ಲೋಕನಾಥ್, ವರಲಕ್ಷ್ಮೀ, ಬಿ.ಗಂಗರಾಜು, ಹೂವಿನ ಗುರಪ್ಪ, ಎನ್.ಚಂದ್ರಶೇಖರ್, ಎಸ್.ರಾಜು, ಎಸ್.ರಾಘವಯ್ಯ, ಆರ್.ಹುಜ್ಜನಪ್ಪ, ಪಿ.ಉಮಾಶಂಕರ್, ಸುಮಿತ್ರ, ಎನ್.ಸುಭಾಷ್, ಎನ್.ಎಸ್.ಈಶ್ವರಯ್ಯ, ಕೆ.ಎನ್.ರುದ್ರಪ್ಪ, ಪಿ.ಎಲ್.ಸೋಮಶೇಖರ್, ಜಿ.ಆರ್.ಅನಂತರಾಜು, ಎಸ್.ಮಹದೇವಪ್ಪ, ರಾಧ, ಆರ್.ಮುನಿರಾಜು, ಬಿ.ಜಿ.ಕೆಂಚರಂಗಪ್ಪ, ಟಿ.ವೆಂಕಟಲಕ್ಷ್ಮೀ, ಪಿ.ರಾಜಣ್ಣ, ಕೆ.ಎಲ್.ಜಯರಾಮಯ್ಯ, ಡಿ.ರಾಮಚಂದ್ರ, ಕೆ.ರಮೇಶ್, ಹೆಚ್.ರಾಮಕೃಷ್ಣ, ಶಾಂತಮ್ಮ, ಆರ್.ಲಕ್ಷ್ಮೀನರಸಿಂಹ, ಆರ್.ಸತ್ಯನಾರಾಯಣ, ಕೆ.ಮುನಿರಾಮಯ್ಯ, ಪಿ.ಆನಂದ್, ಎಸ್.ಪಿ.ತ್ಯಾಗರಾಜು ಇವರುಗಳ ನಿಧನಕ್ಕೆ ಗೌರವ ಸೂಚಿಸಲು ಒಂದು ನಿಮಿಷ ಮೌನವನ್ನಾಚರಿಸಿ ಮೃತರುಗಳ ಆತ್ಮಕ್ಕೆ ಶಾಂತಿಯನ್ನು ಕೋರೋಣವೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಬ್ಯಾಂಕಿನ ವಾರ್ಷಿಕ ವರದಿ 31ನೇಯ ಮಾರ್ಚ್ 2020ಕ್ಕೆ ಅಂತ್ಯಗೊಂಡ ಆರ್ಥಿಕ ವರ್ಷದ ಪರಿಶೋಧಿಸಿದ ಆಸ್ತಿ ಹೊಣೆ ಪಟ್ಟಿ ಹಾಗೂ ಲಾಭ–ನಷ್ಟದ ತಃಖ್ತೆಯನ್ನು ಲೆಕ್ಕ ಪರಿಶೋಧಕರ ವರದಿಯೊಂದಿಗೆ ಸನ್ಮಾನ್ಯ ಸದಸ್ಯರ ಮುಂದಿಡಲು ಇಚ್ಚಿಸುತ್ತೇವೆ.

**ಬ್ಯಾಂಕಿನ ವ್ಯವಹಾರಿಕ ನಿರ್ವಹಣೆ:**

ನಮ್ಮ ಬ್ಯಾಂಕು 2019–20ನೇ ಸಾಲಿನಲ್ಲಿ ಠೇವಣಿ ಸಂಗ್ರಹದಲ್ಲಿ ಶೇ.2.53 ರಷ್ಟು ಹೆಚ್ಚಾಗಿದೆ. ಸಾಲ ಮತ್ತು ಮುಂಗಡಗಳಲ್ಲಿ ಶೇ.39.18 ರಷ್ಟು ಹೆಚ್ಚಾಗಿದೆ. ನಮ್ಮ ಬ್ಯಾಂಕಿನ ಪ್ರಸಕ್ತ ಸಾಲಿನ ಠೇವಣಿ ಹಾಗೂ ಸಾಲ ಮತ್ತು ಮುಂಗಡಗಳ ಅನುಪಾತ ಶೇ.61.85 ರಷ್ಟಿದೆ.

**2019–20ನೇ ಸಾಲಿನ ವಹಿವಾಟಿನ ವಿವರ.** (ರೂ ಲಕ್ಷಗಳಲ್ಲಿ)

| ವಿವರ | 31.03.2019 | 31.03.2020 | ಶೇಕಡವಾರು |
|---|---|---|---|
| ಒಟ್ಟು ಠೇವಣಿ | 28085.22 | 28795.53 | 2.53 |
| ಸಾಲ ಮತ್ತು ಮುಂಗಡಗಳು | 12795.80 | 17809.42 | 39.18 |
| ಲಾಭ | 341.55 | 326.94 | (–4.28) |
| ನಿವ್ವಳ ಲಾಭ | 248.92 | 227.97 | (–8.42) |
| ದುಡಿಯುವ ಬಂಡವಾಳ | 32693.41 | 33431.59 | 2.26 |
| ಸಿಆರ್‌ಎಆರ್ | ಶೇ.21.92 | ಶೇ.17.68 | (–19.34) |
| ಒಟ್ಟು ಆಸ್ತಿಯ ಮೇಲಿನ ಗಳಿಕೆ | ಶೇ.9.63 | ಶೇ.9.99 | 3.74 |
| ಕಾಸ್ಟ್ ಆಫ್ ಫಂಡ್ | ಶೇ.6.96 | ಶೇ.6.77 | (–2.73) |
| ಒಟ್ಟು ಸಿಬ್ಬಂದಿ | 92 | 91 | |

**ಪ್ರಸಕ್ತ ವರ್ಷದ ಲಾಭ:**

ನಮ್ಮ ಬ್ಯಾಂಕು 2019–20ನೇ ಸಾಲಿನಲ್ಲಿ ಸಾಲ ನೀಡಿಕೆ ಗುರಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿ ಬಡ್ಡಿ ಆದಾಯವನ್ನು ವೃದ್ದಿಸಿಕೊಂಡಿರುತ್ತದೆ. ನಂತರ ಜನವರಿ 2019ರಿಂದ ಜಾರಿಗೆ ಬರುವಂತೆ ಸಿಬ್ಬಂದಿ ವರ್ಗದವರಿಗೆ ಕರ್ನಾಟಕ ಸರ್ಕಾರದ 6ನೇ ವೇತನ ಆಯೋಗದ ವೇತನ ಶ್ರೇಣಿ ಜಾರಿಗೊಳಿಸಿ ಸುಮಾರು ಒಂದು ಕೋಟಿ ರೂ ಗಳಷ್ಟು ಹೆಚ್ಚುವರಿ ಖರ್ಚನ್ನು ಭರಿಸಿದ್ದೇವೆ. ಈ ಸಂದರ್ಭದಲ್ಲಿಯೂ ಸಹ ನಮ್ಮ ಬ್ಯಾಂಕು ರೂ.227.97 ಲಕ್ಷ ನಿವ್ವಳ ಲಾಭವನ್ನು ದಾಖಲಿಸಿದೆ.

**ಲಾಭಾಂಶ :**

ಕಳೆದ 2018–19ನೇ ಸಾಲಿನಲ್ಲಿ ಶೇ.10 ರಷ್ಟು ಲಾಭಾಂಶವನ್ನು ನೀಡಲಾಗಿತ್ತು. ನಂತರ 2019–20ನೇ ಸಾಲಿಗೆ ಸಂಬಂಧಿಸಿದಂತೆ ಲೆಕ್ಕ ಪತ್ರಗಳ ವಿವರಣೆಯನ್ನು ಸಾಮಾನ್ಯ ಸಭೆಗೆ ಈಗ ಮಂಡಿಸಿ ಒಪ್ಪಿಗೆಯನ್ನು ಪಡೆಯುತ್ತಿದ್ದೇವೆ.

2019–20ನೇ ಸಾಲಿನ ಒಟ್ಟಾರೆ ವಹಿವಾಟಿನ ವಿವರವನ್ನು ಮೇಲೆ ತಿಳಿಸಿರುವಂತೆ ನಿರ್ದೇಶಕ ಮಂಡಳಿಯಲ್ಲಿ ಸವಿಸ್ತಾರವಾದ ಚರ್ಚೆಯ ನಂತರ ಭಾರತೀಯ ರಿಸರ್ವ್ ಬ್ಯಾಂಕಿನ ಬಿಗಿಯಾದ ಹಣಕಾಸಿನ ನೀತಿಯಿಂದಾಗಿ ಹಾಗೂ ಪ್ರಸಕ್ತ ಸಾಲಿನಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಿದ ಸಾಲ ಮುಂಗಡಗಳನ್ನು ಗಮನದಲ್ಲಿರಿಸಿಕೊಂಡು ನಿರ್ದೇಶಕ ಮಂಡಳಿಯು 2019–20ನೇ ಸಾಲಿಗೆ ಶೇ.12 ರಂತೆ ಲಾಭಾಂಶ ನೀಡಲು ಶಿಫಾರಸ್ಸು ಮಾಡಿರುತ್ತದೆ **(ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆಗೆ ಒಳಪಟ್ಟಂತೆ)**.

ಸಹೃದಯ ಸದಸ್ಯರು ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ಈ ಪ್ರಸ್ತಾವನೆಗೆ ಅನುಮೋದನೆ ನೀಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

**ಸದಸ್ಯತ್ವ ಮತ್ತು ಷೇರು ಬಂಡವಾಳದ ಪ್ರಗತಿಯ ನೋಟ :**

2019–20ನೇ ಸಾಲಿನಲ್ಲಿ 6.73 ಕೋಟಿಯಷ್ಟು ಷೇರು ಬಂಡವಾಳವಿದ್ದು ನಮ್ಮ ಅಧಿಕೃತ ಬಂಡವಾಳ ಬೈಲಾ ಪ್ರಕಾರ ರೂ.20.00 ಕೋಟಿಯಷ್ಟಿದ್ದು, ಬ್ಯಾಂಕಿನ ಪ್ರಗತಿ ಮತ್ತು ವ್ಯವಹಾರದ ಬೆಳವಣಿಗೆ ಗಮನಕ್ಕೆ ತೆಗೆದುಕೊಂಡು ಅಧಿಕೃತ ಬಂಡವಾಳವನ್ನು ರೂ.20.00 ಕೋಟಿಗೆ 2012–13ನೇ ಸಾಲಿನ ಸಾಮಾನ್ಯ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ನಿಗಧಿಪಡಿಸಲಾಯಿತು. ಪ್ರಸಕ್ತ ಸಾಲಿಗೂ ಈ ನಿರ್ಣಯವನ್ನು ಜಾರಿಯಿಡಲು ತೀರ್ಮಾನಿಸಲಾಗಿ ತಮ್ಮ ಅನುಮತಿಗಾಗಿ ಮಂಡಿಸುತ್ತಿದ್ದೇವೆ.

**ಸದಸ್ಯತ್ವ :**

| ವಿವರ | | ವರ್ಷದ ಪ್ರಾರಂಭದಲ್ಲಿದ್ದ ಸದಸ್ಯರು | ವರದಿ ಸಾಲಿನಲ್ಲಿ ಸೇರ್ಪಡೆಯಾದ ಸದಸ್ಯರು | ವರದಿ ಸಾಲಿನಲ್ಲಿ ಸದಸ್ಯತ್ವ ಹಿಂದಕ್ಕೆ ಪಡೆದವರು | ವರದಿ ಸಾಲಿನ ಆಖೈರಿಗೆ ಇರತಕ್ಕ ಸದಸ್ಯರು | ಒಟ್ಟು |
|---|---|---|---|---|---|---|
| **2016–2017** | ಖಾಯಂ ಸದಸ್ಯರು | 15486 | 949 | 80 | 16355 | 18712 |
| | ಸಹ ಸದಸ್ಯರು | 2282 | 181 | 106 | 2357 | |
| **2017–2018** | ಖಾಯಂ ಸದಸ್ಯರು | 16355 | 77 | 5 | 16427 | 18794 |
| | ಸಹ ಸದಸ್ಯರು | 2357 | 25 | 15 | 2367 | |
| **2018–2019** | ಖಾಯಂ ಸದಸ್ಯರು | 16427 | 591 | 136 | 16882 | 19348 |
| | ಸಹ ಸದಸ್ಯರು | 2367 | 225 | 126 | 2466 | |
| **2019–2020** | ಖಾಯಂ ಸದಸ್ಯರು | 16882 | 603 | 143 | 17342 | 19933 |
| | ಸಹ ಸದಸ್ಯರು | 2466 | 196 | 71 | 2591 | |

**ಪಾವತಿಯಾದ ಷೇರು ಬಂಡವಾಳ :** (ರೂ ಲಕ್ಷಗಳಲ್ಲಿ)

| ವಿವರ | | ಸಾಲು ಪ್ರಾರಂಭಕ್ಕೆ | ಸಾಲಿನಲ್ಲಿ ಸೇರ್ಪಡೆ | ಸಾಲಿನಲ್ಲಿ ವಾಪಸಾತಿ | ಸಾಲಾ ಖೈರಿಗೆ ಉಳಿಕೆ | ಒಟ್ಟು ಷೇರು ಬಂಡವಾಳ |
|---|---|---|---|---|---|---|
| **2016–2017** | ಖಾಯಂ ಸದಸ್ಯರು | 467.47 | 36.60 | 19.72 | 484.35 | 810.81 |
| | ಸಹ ಸದಸ್ಯರು | 337.56 | 19.76 | 30.86 | 326.46 | |
| **2017–2018** | ಖಾಯಂ ಸದಸ್ಯರು | 484.35 | 9.96 | 12.76 | 481.55 | 793.05 |
| | ಸಹ ಸದಸ್ಯರು | 326.46 | 3.31 | 18.27 | 311.50 | |
| **2018–2019** | ಖಾಯಂ ಸದಸ್ಯರು | 481.55 | 22.53 | 36.15 | 467.93 | 726.31 |
| | ಸಹ ಸದಸ್ಯರು | 311.50 | 9.80 | 62.92 | 258.38 | |
| **2019–2020** | ಖಾಯಂ ಸದಸ್ಯರು | 467.93 | 14.26 | 39.34 | 442.85 | 673.08 |
| | ಸಹ ಸದಸ್ಯರು | 258.38 | 1.81 | 29.96 | 230.23 | |

**ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು :**

ನಮ್ಮ ಬ್ಯಾಂಕಿನ ಆಪದ್ಧನ ನಿಧಿ ಮತ್ತು ಇತರೇ ನಿಧಿಗಳು ವರದಿ ಸಾಲಿನ ಆರಂಭದಲ್ಲಿ ರೂ.30.23 ಕೋಟಿಗಳಿದ್ದು, ಸಾಲಾಂತ್ಯಕ್ಕೆ ರೂ.32.12 ಕೋಟಿಗಳಿಗೆ ಏರಿದ್ದು ಈ ವೃದ್ಧಿಯು ಶೇ.6.25% ರಷ್ಟಾಗಿರುತ್ತದೆ.

**ಠೇವಣಿಗಳು ಮತ್ತು ದುಡಿಯುವ ಬಂಡವಾಳ :**

ಕಳೆದ ಮೂರು ಸಾಲಿನ ಠೇವಣಿಗಳ ಮತ್ತು ದುಡಿಯುವ ಬಂಡವಾಳದ ತುಲನಾತ್ಮಕ ಅಂಕಿ ಅಂಶಗಳು ಕೆಳಕಂಡಂತಿವೆ:

**(ರೂ. ಕೋಟಿಗಳಲ್ಲಿ)**

| **ವಿವರ** | **31.03.2018** | **31.03.2019** | **31.03.2020** |
|---|---|---|---|
| ಠೇವಣಾತಿಗಳು | 273.22 | 280.85 | 287.96 |
| ದುಡಿಯುವ ಬಂಡವಾಳ | 319.58 | 326.93 | 333.52 |

ಬ್ಯಾಂಕು ಗಾಹಕರ ಠೇವಣಿಗಳಿಗೆ ನೀಡುವ ಬಡ್ಡಿ ದರವು ಆಕರ್ಷಕವಾಗಿದ್ದು ಎಲ್ಲಾ ವರ್ಗದ ಗ್ರಾಹಕರುಗಳಿಗೆ ಅನುಕೂಲ ಮಾಡಲಾಗಿದೆ. ಹಿರಿಯ ನಾಗರೀಕರಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ. ನೊಂದಾಯಿತ ಸಂಘ ಸಂಸ್ಥೆಗಳಿಗೆ ಸಾಮಾನ್ಯ ಬಡ್ಡಿದರದ ಮೇಲೆ ಶೇ.0.50 ರಷ್ಟು ಹೆಚ್ಚಿನ ಬಡ್ಡಿಯನ್ನು 06 ತಿಂಗಳ ಮೇಲ್ಪಟ್ಟ ಅವಧಿಯ ಠೇವಣಿಗಳಿಗೆ ನೀಡಲಾಗುತ್ತಿದೆ. ಎಲ್ಲಾ ರೀತಿಯ ಠೇವಣಿಗಳು ವಿಮೆ ಸೌಲಭ್ಯಕ್ಕೊಳಪಟ್ಟಿರುತ್ತವೆ. ಠೇವಣಿಗಳಿಗೆ ರೂ.5.00 ಲಕ್ಷದವರೆಗೆ ಭಾರತೀಯ ರಿಸರ್ವ್ ಬ್ಯಾಂಕಿನ ಸೂಚಿತ ವಿಮಾ ಕಂಪನಿ ಡಿಐಸಿಜಿಸಿಯ ಮೂಲಕ ವಿಮೆ ಭದ್ರತೆ ಮಾಡಲಾಗಿರುತ್ತದೆ. ಸದರಿ ವಿಮೆ ಕಂತನ್ನು ಬ್ಯಾಂಕು ತನ್ನ ಸ್ವಂತ ಖರ್ಚಿನಲ್ಲಿಯೇ ಭರಿಸುತ್ತಿದೆ.

ಆದಾಯ ತೆರಿಗೆ ಇಲಾಖೆಯ ಆದೇಶದ ಪ್ರಕಾರ ಗ್ರಾಹಕರಿಗೆ ನೀಡುವ ಠೇವಣಿಗಳ ಬಡ್ಡಿಯ ಮೂಲದಲ್ಲಿಯೇ TDS ಕಟಾವು ಮಾಡಲಾಗುತ್ತಿದೆ.

**ಸಾಲ ಮತ್ತು ಮುಂಗಡಗಳು :**

ಬ್ಯಾಂಕು ವಿವಿಧ ಉದ್ದೇಶಗಳಿಗೆ ಸದಸ್ಯರುಗಳಿಗೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಸಾಕಷ್ಟು ಭದ್ರತೆಯನ್ನು ಸದಸ್ಯರುಗಳಿಂದ ಪಡೆಯಲಾಗುತ್ತಿದೆ.

ಮಗ್ಗಗಳನ್ನು / ಹುರಿಮಿಷನ್ ಯಂತ್ರಗಳನ್ನು ಬ್ಯಾಂಕಿಗೆ ಈಡು ಮಾಡಿಕೊಂಡು ಸದಸ್ಯರುಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸುಲಭ ಕಂತುಗಳಲ್ಲಿ ಪಾವತಿ ಮಾಡುವಂತೆ ಸಾಲ ನೀಡಲಾಗುತ್ತಿದೆ. ಈ ಸಾಲಗಳಿಗೆ ಯಂತ್ರಗಳನ್ನಲ್ಲದೆ ಇತರೇ ಭದ್ರತೆಯನ್ನು ಪಡೆದುಕೊಳ್ಳಲಾಗುತ್ತಿದೆ.

ಸದಸ್ಯರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಶೇಕಡ 8.50 ರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆ ಬ್ಯಾಂಕಿನಲ್ಲಿ ಲಭ್ಯವಿದ್ದು ಗರಿಷ್ಠ ಮೊತ್ತ ರೂ.5 ಲಕ್ಷದವರೆಗೂ ಸಾಲ ಪಡೆಯಬಹುದು.

**ನೇಕಾರರ ಸಾಲ ಮನ್ನಾ ಯೋಜನೆ:**

**ಕರ್ನಾಟಕ ಸರ್ಕಾರ ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಪಡೆದ ಸಾಲಗಳ ಮೊತ್ತದಲ್ಲಿ ರೂ.1.00 ಲಕ್ಷಗಳವರೆಗೆ ಮನ್ನಾ ಮಾಡುವುದಾಗಿ ಘೋಷಿಸಿ, ದಿ:02.08.2019ರಂದು ಸರ್ಕಾರಿ ಆದೇಶ ಸಂಖ್ಯೆ:ವಾಕೈ/ಜಕೈಯೋ/2019ರ ಮೂಲಕ ಹೊರಡಿಸಲಾದ ಆದೇಶದ ಅನುಸಾರ ನಮ್ಮ ಬ್ಯಾಂಕಿನಲ್ಲಿ ನೇಕಾರಿಕೆ ಉದ್ದೇಶಕ್ಕಾಗಿ ಸಾಲ ಪಡೆದ 367 ಮಂದಿ ನೇಕಾರ ಸದಸ್ಯರುಗಳ ಕ್ಲೇಮ್ ಬಿಲ್ಲನ್ನು ಸರ್ಕಾರಕ್ಕೆ ಸಲ್ಲಿಸಿ, ಸರ್ಕಾರದಿಂದ ಬಿಡುಗಡೆಗೊಂಡ ರೂ.2,84,62,268/–ಗಳ ಮೊತ್ತವನ್ನು ನೇಕಾರ ಸದಸ್ಯ ಫಲಾನುಭವಿಗಳಿಗೆ ತಲುಪಸಿದ್ದು ಇದು ಬ್ಯಾಂಕಿಗೆ ಹೆಮ್ಮೆಯ ವಿಷಯವಾಗಿರುತ್ತದೆ. ಈ ಬಗ್ಗೆ ಫಲಾನುಭವಿ ನೇಕಾರ ಸದಸ್ಯರುಗಳು ಕೊರೊನಾ ವೈರಾಣು ಸಮಸ್ಯೆಯಿಂದ ನೇಕಾರಿಕೆ ಉದ್ಯಮ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದ್ದಂತಹ ಸಂದರ್ಭದಲ್ಲಿ ಬ್ಯಾಂಕು ಸರ್ಕಾರದಿಂದ ಸಾಲಮನ್ನಾ ಪರಿಹಾರ ದೊರಕಿಸಿಕೊಟ್ಟ ಬಗ್ಗೆ ಬ್ಯಾಂಕಿಗೆ ಅಭಿನಂದನೆಯನ್ನು ಸಲ್ಲಿಸಿರುತ್ತಾರೆ.**

**ನೇಕಾರಿಕೆಯ ಸಾಲ :**

ಶೇ.1 ಹಾಗೂ ಶೇ.3 ರ ಬಡ್ಡಿದರದಲ್ಲಿ ಬ್ಯಾಂಕಿನಿಂದ ನೀಡಲಾದ ಸಾಲಗಳಿಗೆ ವರದಿ ಸಾಲಿನಲ್ಲಿ ಸರ್ಕಾರದಿಂದ ರೂ.31.72 ಲಕ್ಷ ಬಡ್ಡಿ ಸಹಾಯ ಧನವು ಬ್ಯಾಂಕಿಗೆ ಬರಬೇಕಾಗಿದ್ದು, ಆ ಪೈಕಿ ರೂ.19.67 ಲಕ್ಷ ಪ್ರಸಕ್ತ ಸಾಲಿನಲ್ಲಿ ಬಂದಿದ್ದು, ಬಾಕಿ ರೂ.12.05 ಲಕ್ಷಗಳು ಬರಬೇಕಾಗಿರುತ್ತದೆ. ಸರ್ಕಾರದ ಆದೇಶದ ನಂತರ ಶೇ.1 ಹಾಗೂ ಶೇ.3ರ ಬಡ್ಡಿದರದ ನೇಕಾರಿಕೆ ಸಾಲ ನೀಡಿಕೆಯನ್ನು ಪ್ರಸಕ್ತ ಸಾಲಿನಲ್ಲಿಯೂ ಸಹ ಮುಂದುವರೆಸಲಾಗಿರುತ್ತದೆ. ಸದರಿ ಸೌಲಭ್ಯವನ್ನು ರೇಷ್ಮೆ ಹುರಿ ಮಾಡುವವರಿಗೆ ಮತ್ತು ರೇಷ್ಮೆ ಬಣ್ಣ ಮಾಡುವಂತಹ ಸದಸ್ಯರುಗಳಿಗೂ ಸಹ ವಿಸ್ತರಿಸಲಾಗಿರುತ್ತದೆ. ಸದರಿ ಸಾಲಗಳಿಗೆ ಬ್ಯಾಂಕಿನಿಂದ ವಿಧಿಸುವ ಸೇವಾ ಶುಲ್ಕವನ್ನು ಶೇ.50 ರಷ್ಟು ಕಡಿಮೆಗೊಳಿಸಿರುತ್ತದೆ.

**ಕರ್ನಾಟಕ ಸರ್ಕಾರ ಜವಳಿ ಇಲಾಖೆಯವರು ನೇಕಾರಿಕೆಗೆ ನೀಡುವ ಸಹಾಯಧನ (Subsidy) :**

ನೇಕಾರರ ವಿವಿಧ ಸಂಘಗಳ ಪ್ರಯತ್ನದ ಫಲವಾಗಿ ಕರ್ನಾಟಕ ಸರ್ಕಾರವು ಸಣ್ಣ ಮತ್ತು ಗುಡಿ ನೇಕಾರಿಕೋದ್ಯಮದ ಪ್ರಗತಿಗಾಗಿ ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ನೇಕಾರರಿಗೆ ಎರಡು ಮಗ್ಗಗಳ ಘಟಕ ಸ್ಥಾಪಿಸಲು ಪ್ರೋತ್ಸಾಹ ನೀಡುವ ದಿಸೆಯಲ್ಲಿ ಸರ್ಕಾರವು ಒಂದು ಮಗ್ಗಕ್ಕೆ ಬೇಕಾಗುವ ವೆಚ್ಚವನ್ನು ಉಚಿತವಾಗಿ ಭರಿಸಿ ಮತ್ತೊಂದು ಮಗ್ಗಕ್ಕೆ ಸಹಕಾರಿ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆ, ಅದೇ ರೀತಿ ಗಣಕೀಕೃತ ಜಾಕಾರ್ಡ್ ಖರೀದಿಸಲು ಶೇ.50ರಷ್ಟು ಮೊತ್ತ ಸಹಾಯಧನ ನೀಡಿ ಉಳಿದ ಶೇ.50ರಷ್ಟು ಮೊತ್ತವನ್ನು ಸಹಕಾರ ಬ್ಯಾಂಕುಗಳ ಮೂಲಕ ಸಾಲದ ರೂಪವಾಗಿ ನೀಡುವ ಯೋಜನೆಗಳಡಿಯಲ್ಲಿ ನಮ್ಮ ಬ್ಯಾಂಕು 2019–20ನೇ ಸಾಲಿನಲ್ಲಿ ಒಟ್ಟು 76 ನೇಕಾರ ಫಲಾನುಭವಿ ಸದಸ್ಯರಿಗೆ ಮಗ್ಗಗಳನ್ನು ಸ್ಥಾಪಿಸಲು ಒಟ್ಟು ರೂ.197.85 ಲಕ್ಷ ಹಾಗೂ 07 ನೇಕಾರ ಫಲಾನುಭವಿ ಸದಸ್ಯರಿಗೆ ಕಂಪ್ಯೂಟರ್ ಜಕಾರ್ಡ್‌ಗಳನ್ನು ಸ್ಥಾಪಿಸಲು ಒಟ್ಟು ರೂ.30.00 ಲಕ್ಷದಷ್ಟು ಸಾಲವನ್ನು ಮಂಜೂರು ಮಾಡಲಾಗಿದೆ. ಇದಕ್ಕಾಗಿ ಈ ಯೋಜನೆಯಡಿ ಸ್ಥಾಪಿಸುವ ಯಂತ್ರಗಳನ್ನಲ್ಲದೆ ಇತರೇ ಭದ್ರತೆಯನ್ನು ಸಹ ಪಡೆಯಲಾಗಿದೆ.

**ಇ. ಎಂ. ಐ. ಬಡ್ಡಿದರದ ಸಾಲ ಯೋಜನೆ :**

| | | |
|---|---|---|
| ಸ್ಥಿರಾಸ್ತಿ ಅಡಮಾನ ಸಾಲ | 11.50 | 60/120/180 ತಿಂಗಳು |
| ಗೃಹಸಾಲ | 10.50 | 180 ತಿಂಗಳು |
| ವಾಹನ ಸಾಲ ದ್ವಿಚಕ್ರ | 11.70 | 36 ತಿಂಗಳು |
| ವಾಹನ ಸಾಲ ನಾಲ್ಕು ಚಕ್ರ | 11.50 | 60 ತಿಂಗಳು |

**ಎನ್.ಇ.ಎಫ್.ಟಿ. / ಆರ್.ಟಿ.ಜಿ.ಎಸ್. ಸೌಲಭ್ಯ :**

ಎನ್.ಇ.ಎಫ್.ಟಿ./ಆರ್.ಟಿ.ಜಿ.ಎಸ್. ಮೂಲಕ ತಾವು ಇಚ್ಚಿಸುವಂತಹ ಇತರೇ ಬ್ಯಾಂಕುಗಳ ಖಾತೆದಾರರಿಗೆ ತಮ್ಮ ಹಣವನ್ನು ಕೂಡಲೇ ವರ್ಗಾಯಿಸುವ ಸೌಲಭ್ಯ ಹಾಗೂ ಇತರೇ ಬ್ಯಾಂಕುಗಳಿಂದ ಖಾತೆದಾರರು ತಮ್ಮ ಖಾತೆಗಳಿಗೆ ಹಣವನ್ನು ಜಮಾ ಪಡೆಯುವ ನೇರ ಸೌಲಭ್ಯವನ್ನು (HOST TO HOST SYSTEM) ಒದಗಿಸುತ್ತಿದ್ದೇವೆ. ಈ ಸೌಲಭ್ಯಗಳನ್ನು ನಮ್ಮ ಬ್ಯಾಂಕಿನಿಂದಲೇ ಒದಗಿಸಲು ಐ.ಎಫ್.ಎಸ್.ಸಿ. ಕೋಡ್ ಸಂಖ್ಯೆಯನ್ನು ಪ್ರತ್ಯೇಕವಾಗಿ ಪಡೆದುಕೊಳ್ಳಲಾಗಿರುತ್ತದೆ.

**ಅನುತ್ಪಾದಕ ಸಾಲಗಳು :**

ನಿರ್ದೇಶಕ ಮಂಡಳಿಯು ಅನುತ್ಪಾದಕ ಸಾಲದ ವಸೂಲಾತಿಗಾಗಿ ಕ್ರಮವಿಟ್ಟಿದ್ದು ಹಾಗೂ ಅದರ ಪ್ರಮಾಣವನ್ನು ಕಡಿಮೆಗೊಳಿಸಲು ವಸೂಲಾತಿಯ ಕ್ರಮವನ್ನು ಬಲಪಡಿಸಲು ಸೂಕ್ತ ಕ್ರಮ ಕೈಗೊಂಡಿದೆ.

ಬ್ಯಾಂಕಿನ ಅನುತ್ಪಾದಕ ಸಾಲದ ವಿವರ ಇಂತಿದೆ.

(ರೂ ಲಕ್ಷಗಳಲ್ಲಿ)

| ವಿವರ | 2018 | 2019 | 2020 |
|---|---|---|---|
| ಅನುತ್ಪಾದಕ ಆಸ್ತಿಯ ಮೊತ್ತ | 950.35 | 588.78 | 574.27 |
| ನಿವ್ವಳ ಅನುತ್ಪಾದಕ ಆಸ್ತಿಯ ಮೊತ್ತ | 70.71 | –341.50 | –384.82 |
| ಶೇಕಡವಾರು ಅನುತ್ಪಾದಕ ಆಸ್ತಿಯ ಪ್ರಮಾಣ | 7.47% | 4.60% | 3.22% |
| ಶೇಕಡವಾರು ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ | 0.60% | –2.88% | –2.28% |

**ಬ್ಯಾಂಕಿನ ಸಿಬ್ಬಂದಿಗಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮ :**

ಬ್ಯಾಂಕಿನ ಸಿಬ್ಬಂದಿಗಳನ್ನು ಆರೋಗ್ಯ ವಿಮೆ ಯೋಜನೆಯಲ್ಲಿ ಮೆಡಿಕ್ಲೇಮು ಪಾಲಿಸಿಗೊಳಪಡಿಸಿದ್ದು ವರದಿ ಸಾಲಿನಲ್ಲೂ ಸಿಬ್ಬಂದಿಗಳಿಗೆ ಕ್ಷೇಮದ ಸೌಲಭ್ಯ ಒದಗಿಸಿದೆ.

**ಸದಸ್ಯರ ಮರಣ ಪರಿಹಾರ ನಿಧಿ :**

ಬ್ಯಾಂಕಿನ ಸದಸ್ಯರುಗಳು ಮರಣ ಹೊಂದಿದಾಗ ನೀಡುವ ಮರಣ ಪರಿಹಾರ ನಿಧಿ ಮೊತ್ತ ರೂ.8,000/– ಗಳನ್ನು ನೀಡಲಾಗುತ್ತಿರುತ್ತದೆ.

**ಕರ್ನಾಟಕ ರಾಜ್ಯೋತ್ಸವ ಮತ್ತು ಪ್ರತಿಭಾ ಪುರಸ್ಕಾರ :**

ಪ್ರತಿಭಾ ಪುರಸ್ಕಾರ ಹಾಗೂ ಕನ್ನಡರಾಜ್ಯೋತ್ಸವ ಕಾರ್ಯಕ್ರಮವನ್ನು ದಿನಾಂಕ:17.11.2019 ರಂದು ಬೆಳಿಗ್ಗೆ 10.00 ಘಂಟೆಗೆ ಪತಿಯಪ್ಪ ಭವನದಲ್ಲಿ ಏರ್ಪಡಿಸಲಾಗಿತ್ತು. ಬೆಂಗಳೂರು ದೂರದರ್ಶನ ಕೇಂದ್ರ ಚಂದನ ವಾಹಿನಿಯ ಥಟ್ ಅಂತ ಹೇಳಿ ಕಾರ್ಯಕ್ರಮದ ನಿರೂಪಕರು ವೈದ್ಯರು ಮತ್ತು ಕ್ವಿಜ್ ಮಾಸ್ಟರ್ ಆದ ಮಾನ್ಯಶ್ರೀ ಡಾ. ನಾ. ಸೋಮೇಶ್ವರರವರು ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದರು.

ಈ ಸಂಧರ್ಭದಲ್ಲಿ ಎಸ್.ಎಸ್.ಎಲ್.ಸಿ ಯ ಒಟ್ಟು 103 ಮಂದಿ ವಿದ್ಯಾರ್ಥಿಗಳು, ಡಿಪ್ಲೊಮ ಮತ್ತು ಪಿ.ಯು.ಸಿ.ಯ ಒಟ್ಟು 107 ಮಂದಿ ವಿದ್ಯಾರ್ಥಿಗಳು, ಪದವಿ ಹಾಗೂ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ ಮತ್ತು ವೃತ್ತಿಪರ ವಿದ್ಯಾರ್ಥಿಗಳನ್ನೊಳಗೊಂಡಂತೆ ಒಟ್ಟು 291 ವಿದ್ಯಾರ್ಥಿಗಳಿಗೆ ಪುರಸ್ಕಾರ ಮಾಡಲಾಯಿತು.

**ಟೆಕ್ಸ್‌ಟೈಲ್ ಸಹಕಾರಿ ವಿದ್ಯಾರ್ಥಿ ಮಿತ್ರ (ಬುಕ್ ಬ್ಯಾಂಕ್):**

ಬ್ಯಾಂಕಿನಿಂದ ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬೇಕಾಗಿರುವ ಪಠ್ಯ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ 531 ಸದಸ್ಯರ ಮಕ್ಕಳು ನಮ್ಮ ಬುಕ್ ಬ್ಯಾಂಕಿನಿಂದ ಪಠ್ಯ ಪುಸ್ತಕಗಳನ್ನು ಪಡೆದಿರುತ್ತಾರೆ. ಈ ರೀತಿ ಪಡೆದಂತಹ ಪಠ್ಯ ಪುಸ್ತಕಗಳನ್ನು ಪರೀಕ್ಷೆ ಮುಗಿದ ನಂತರ ಕೂಡಲೇ ಬ್ಯಾಂಕಿಗೆ ವಾಪಸ್ಸು ಮಾಡುವ ಎರವಲು ಸೇವೆ ಜಾರಿಯಲ್ಲಿರುತ್ತದೆ. ವಿದ್ಯಾರ್ಥಿಗಳ ಅಜ್ಜ ಅಥವಾ ಅಜ್ಜಿಯರು ಸದಸ್ಯರಾಗಿದ್ದಲ್ಲಿ ಅವರ ಮೊಮ್ಮಕ್ಕಳಿಗೂ ಸಹ ಬುಕ್ ಬ್ಯಾಂಕ್ ಸೌಲಭ್ಯವನ್ನು ನೀಡಲಾಗುತ್ತಿದೆ.

**ಕೋರ್ ಬ್ಯಾಂಕ್ ವ್ಯವಸ್ಥೆ :**

ಕೋರ್ ಬ್ಯಾಂಕು ಅಳವಡಿಕೆಯು ಸಂಪೂರ್ಣಗೊಂಡಿದ್ದು ಬ್ಯಾಂಕಿನ ಎಲ್ಲಾ ಶಾಖೆಗಳು ಕೋರ್ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ABB (Any Branch Banking) ಬ್ಯಾಂಕಿಂಗ್ ಸೌಲಭ್ಯದ ಅಡಿಯಲ್ಲಿ ಎಲ್ಲಾ ಶಾಖೆಗಳು ಒಳಪಟ್ಟಿದ್ದು, ಸದರಿ ಸೌಲಭ್ಯದಲ್ಲಿ ನಮ್ಮ ಗ್ರಾಹಕರು ಯಾವುದೇ ಶಾಖೆಯಲ್ಲಾದರೂ ನಿಗಧಿಪಡಿಸಿರುವ ಮಿತಿಗೊಳಪಟ್ಟು ನಗದಿನ ವ್ಯವಹಾರದ ಶೀಘ್ರ ಸೇವೆ ಪಡೆಯಲು ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಮಾನ್ಯ ಸದಸ್ಯರಲ್ಲಿ ಕೋರುತ್ತೇವೆ.

1. ಉಳಿತಾಯ ಖಾತೆ, ಚಾಲ್ತಿ ಖಾತೆ ಹಾಗೂ ಓ.ಡಿ. ಖಾತೆಗಳ ನಗದು ಜಮಾ, ಖರ್ಚು ವ್ಯವಹಾರಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಚೆಕ್ಕುಗಳ ವರ್ಗಾವಣೆಯು ನಮ್ಮ ಬ್ಯಾಂಕಿನ ಶಾಖೆಗಳ ಚೆಕ್ಕುಗಳಿಗೆ ಮಾತ್ರ ಅನ್ವಯಿಸುತ್ತದೆ.
3. ನಗದು ವ್ಯವಹಾರದ ಗರಿಷ್ಟ ಮಿತಿ ರೂ.30,000/– ಮಾತ್ರ.
4. ಖಾತೆದಾರರಿಗೆ ಮಾತ್ರ ನಗದು ಪಡೆಯಲು ಅವಕಾಶವಿರುತ್ತದೆ.

ಗ್ರಾಹಕರಿಗೆ ತ್ವರಿತ ನಗದು ಪಾವತಿಗಾಗಿ ನೇರ ನಗದು ಪಾವತಿ "Teller Counter" ವ್ಯವಸ್ಥೆ ಕಲ್ಪಿಸಲಾಗಿರುತ್ತದೆ ಹಾಗೂ ಈಗಾಗಲೇ ನೊಂದಾಯಿತ ಗ್ರಾಹಕರುಗಳಿಗೆ ಎಸ್.ಎಂ.ಎಸ್. ಸೇವೆ ಒದಗಿಸಲಾಗುತ್ತಿದ್ದು, ಈವರೆಗೆ ಎಸ್.ಎಂ.ಎಸ್. ಸೇವೆ ಪಡೆಯಲು ಹೆಸರು ನೊಂದಾಯಿಸದ ಗ್ರಾಹಕರು ಅವರ ಹೆಸರನ್ನು ನೊಂದಾಯಿಸಿಕೊಂಡು ಎಸ್.ಎಂ.ಎಸ್ ಸೌಲಭ್ಯವನ್ನು ಪಡೆಯುವುದು.

**ಮಾನವ ಸಂಪನ್ಮೂಲ :**

ಪ್ರಸಕ್ತ ಬ್ಯಾಂಕೋದ್ಯಮದ ವಾತಾವರಣವು ತೀವ್ರ ಪೈಪೋಟಿಯನ್ನು ಎದುರಿಸುತ್ತಿದೆ. ಬ್ಯಾಂಕು ಗ್ರಾಹಕ ಸ್ನೇಹಿಯಾಗಿ ಅವರಿಗೆ ತೃಪ್ತಿಯಾಗುವ ಸೇವೆಗಳನ್ನು ಒದಗಿಸಲು ಮಾನವ ಸಂಪನ್ಮೂಲದ ಸಮಗ್ರ ಅಭಿವೃದ್ಧಿಯತ್ತ ಒತ್ತು ಕೊಟ್ಟು, ಅಗತ್ಯವಿರುವ ವಿವಿಧ ತರಬೇತಿಗಳನ್ನು ಸಕಾಲದಲ್ಲಿ ಅವರಿಗೆ ಒದಗಿಸಿ ಅವರು ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡಲು ಹಾಗೂ ಅವರ ದಕ್ಷತೆ, ಕಾರ್ಯಕುಶಲತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸ್ಫೂರ್ತಿಗೊಳ್ಳಲು ನಿರ್ದೇಶಕ ಮಂಡಳಿಯು ಶ್ರಮಿಸುತ್ತಿದೆ.

ಬ್ಯಾಂಕಿನ ಅನುಮೋದಿತ ವೃಂದ ಬಲ ಹಾಗೂ ಪ್ರಸಕ್ತವಿರುವ ಸಂಖ್ಯಾ ಬಲವು ಈ ಕೆಳಕಂಡಂತಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಮಂಜೂರಾತಿ ರೀತ್ಯಾ | ಕಾರ್ಯನಿರತ ಸಿಬ್ಬಂದಿ |
|---|---|---|---|
| 1 | ಮುಖ್ಯಕಾರ್ಯನಿರ್ವಾಹಕರು | 01 | 01 |
| 2 | ಉಪಪ್ರಧಾನ ವ್ಯವಸ್ಥಾಪಕರು | – | 00 |
| 3 | ಅನುಪಾಲನಾಧಿಕಾರಿ | 01 | 01 |
| 4 | ಶಾಖಾ ವ್ಯವಸ್ಥಾಪಕರು | 08 | 12 |
| 5 | ಈ.ಡಿ.ಪಿ ವ್ಯವಸ್ಥಾಪಕರು | – | 01 |
| 6 | ಲೆಕ್ಕಿಗರು | 09 | 13 |
| 7 | ಹಿರಿಯ ಸಹಾಯಕರು | 22 | 21 |
| 8 | ಕಿರಿಯ ಸಹಾಯಕರು | 37 | 22 |
| 9 | ಕಛೇರಿ ಸಹಾಯಕರು | 20 | 18 |
| 10 | ವಾಹನ ಚಾಲಕರು | 03 | 02 |
| 11 | ಶೀಘ್ರಲಿಪಿಗಾರರು | 01 | – |
| | **ಒಟ್ಟು** | **102** | **91** |

**ಕೃತಜ್ಞತೆಗಳು :**

ಬ್ಯಾಂಕಿನ ಯಶಸ್ಸಿಗೆ ಠೇವಣಿ ಸಂಗ್ರಹ ಹಾಗೂ ಸಾಲ ವಿತರಣೆ ಮೂಲಾಧಾರ. ನಮ್ಮ ಕೋರಿಕೆಗೆ ಮನ್ನಣೆಯಿತ್ತು ಬ್ಯಾಂಕಿನಲ್ಲಿ ಠೇವಣಿಯನ್ನು ತೊಡಗಿಸಿ ಬ್ಯಾಂಕಿನ ಅಭಿವೃದ್ಧಿಗೆ ಕಾರಣರಾದ ಎಲ್ಲಾ ಠೇವಣಿದಾರರಿಗೂ, ಗ್ರಾಹಕರಿಗೂ ಅಲ್ಲದೆ ವೇಳೆಗೆ ಸರಿಯಾಗಿ ಕಂತು ಮತ್ತು ಬಡ್ಡಿ ಪಾವತಿಸುವ ಮೂಲಕ ಸಾಲ ಮರುಪಾವತಿಸಿದ ಸದಸ್ಯರುಗಳೆಲ್ಲರಿಗೂ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಈ ಕೆಳಕಂಡ ಸಂಸ್ಥೆಗಳು ನಮ್ಮ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಬ್ಯಾಂಕಿನ ಪುರೋಭಿವೃದ್ಧಿಗೆ ಕಾರಣರಾಗಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇವೆ.

ದೇವಾಂಗ ಸಂಘ, ದೇವಾಂಗ ಯೂನಿಯನ್ ಸ್ಪೋರ್ಟ್ಸ್ ಕ್ಲಬ್, ಹಂಪಿ ಹೇಮಕೂಟ, ಶ್ರೀ ಗಾಯಿತ್ರಿ ಪೀಠ ಶ್ರೀ ಶ್ರೀ ಶ್ರೀ ದಯಾನಂದಪುರಿ ಮಹಾ ಸ್ವಾಮೀಜಿ, ಶ್ರೀ ಗಾಯಿತ್ರಿ ಪೀಠ ಮಹಾ ಸಂಸ್ಥಾನ, ಶ್ರೀ ಓಣಿ ಆಂಜನೇಯ ಸ್ವಾಮಿ ಟೆಂಪಲ್ ಟ್ರಸ್ಟ್, ಶ್ರೀ ಮಾರುತಿ ಗೃಹ ನಿರ್ಮಾಣ ಸೊಸೈಟಿ, ಮೈಸೂರು ಪವರ್‌ಲೂಂ ಸಿಲ್ಕ್ ಮ್ಯಾನುಫ್ಯಾಕ್ಚರರ್ಸ್ ಕೋ–ಆಪರೇಟಿವ್ ಸೊಸೈಟಿ ಲಿ., ಕರ್ನಾಟಕ ರಾಜ್ಯ ಪವರ್‌ಲೂಂ ಮಾರ್ಕೆಟಿಂಗ್ ಫೆಡರೇಷನ್, ಕೆ.ಆರ್.ಶೆಟ್ಟಿಪೇಟೆ ಮರ್ಚೆಂಟ್ಸ್ ಅಸೋಸಿಯೇಟ್ಸ್, ಶ್ರೀ ವಿನಾಯಕ ವಿದ್ಯಾಸಂಸ್ಥೆ, ಅಮರಜ್ಯೋತಿ ಲೈಬ್ರರಿ, ಮೈಸೂರು ಪ್ರಾಂತೀಯ ರೇಷ್ಮೆ ಕೈಮಗ್ಗದವರ ಸಹಕಾರ ಸಂಘ, ಮುದ್ದಪ್ಪ ಬಿ.ವಿ. ವೆಂಕಟಮ್ಮ ಮುದ್ದಪ್ಪ ಸೇವಾ ಸಮಿತಿ, ಕಾಮನಗುಡಿ ಚಾರಿಟೀಸ್, ಆಂಧ್ರ ದೇವಾಂಗ

ಸಂಘ, ಮೆ:ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ, ಶ್ರೀ ಜೀವ್ವೇಶ್ವರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ., ಶ್ರೀ ಜೀವ್ವೇಶ್ವರ ವಿದ್ಯಾಭಿವೃದ್ಧಿ ಟ್ರಸ್ಟ್, ತೊಗಟವೀರ ಸಂಘ, ಗಾಯಿತ್ರಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಶ್ರೀ ವೀರಶೈವ ಸಧರ್ಮ ವರ್ಧಿನಿ ಸಂಘ, ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದ ನ್ಯಾಸ, ಶ್ರೀ ಸಿದ್ದೇಶ್ವರ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ, ಶ್ರೀ ಚೌಡೇಶ್ವರಿ ಚಾರಿಟೆಬಲ್ ಟ್ರಸ್ಟ್–ಲಕ್ಕಸಂದ್ರ, ಶ್ರೀ ಕೋದಂಡರಾಮ ಟೆಂಪಲ್ ಟ್ರಸ್ಟ್–ಪ್ರಕಾಶನಗರ, ನವಜ್ಯೋತಿ ಕನ್ನಡ ಕಲಾ ಸಂಘ–ಆನೇಕಲ್, ಶಾರದಾ ಸೇವಾಶ್ರಮ–ದೊಡ್ಡಬಳ್ಳಾಪುರ, ದಿ ಮೈಸೂರ್ ಸಿಲ್ಕ್ ಹ್ಯಾಂಡ್ ಲೂಂ ವೀವರ್ಸ್ ಅಸೋಸಿಯೇಷನ್ ಹಾಗೂ ಬ್ಯಾಂಕಿನ ಕಾರ್ಯನಿರ್ವಹಣೆಗಾಗಿ ಮತ್ತು ದಿನನಿತ್ಯದ ವ್ಯವಹಾರವು ಸುಗಮವಾಗಿ ಸಾಗಲು ಸಹಕರಿಸಿದ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಐ.ಡಿ.ಬಿ.ಐ. ಬ್ಯಾಂಕ್, ಇಂಡಸ್ಇಂದ್ ಬ್ಯಾಂಕ್, ಐ.ಸಿ.ಐ.ಸಿ.ಐ. ಬ್ಯಾಂಕು, ಪಂಜಾಬ್ ನ್ಯಾಷನಲ್ ಬ್ಯಾಂಕ್, ಅಪೆಕ್ಸ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ (ವಿಜಯ ಬ್ಯಾಂಕ್)–ಗೊಟ್ಟಿಗೆರೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸೆಂಟ್ ಮಾರ್ಕ್ಸ್ ರಸ್ತೆ ಮತ್ತು ಆನೇಕಲ್, ಕೆನರಾ ಬ್ಯಾಂಕ್ (ಸಿಂಡಿಕೇಟ್ ಬ್ಯಾಂಕ್) ಆನೇಕಲ್, ಆಕ್ಸಿಸ್ ಬ್ಯಾಂಕ್‌ಗಳ ಅಧಿಕಾರಿಗಳಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಕಾಲಕಾಲಕ್ಕೆ ಸೂಕ್ತ ನಿರ್ದೇಶನ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ ನಾವು ಅಭಾರಿಯಾಗಿದ್ದೇವೆ. ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನ ಮತ್ತು ಸಲಹೆ ನೀಡುತ್ತಿರುವ ಸಹಕಾರ ಇಲಾಖೆಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಹಾಗೂ ಅಧಿಕಾರಿಗಳಾದ ಶ್ರೀ ಸುಧಾಕರ ಭಟ್‌ರವರು ಬ್ಯಾಂಕಿನ ಅಭಿವೃದ್ಧಿಗೆ ಉಪಯುಕ್ತ ಸಲಹೆಗಳನ್ನು ನೀಡಿರುತ್ತಾರೆ. ಇವರುಗಳಿಗೂ ಸಹ ನಮ್ಮ ಕೃತಜ್ಞತೆಗಳು.

2019–20ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೀಲಿಸಿದ ಸನ್ನದು ಲೆಕ್ಕ ಪರಿಶೋಧಕರಾದ ಮೆ: ಎಂ.ಎಸ್.ಎಸ್.ವಿ ಮತ್ತು ಕಂ. ರವರಿಗೆ ನಾವು ವಂದಿಸುತ್ತೇವೆ.

ಬ್ಯಾಂಕಿನ ಪುರೋಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ನಾವು ವಂದಿಸುತ್ತೇವೆ.

ಕೊನೆಯದಾಗಿ ಬ್ಯಾಂಕಿನ ಸದಸ್ಯರುಗಳು ಶಿಸ್ತು ಕಾಪಾಡಿಕೊಂಡು ಬ್ಯಾಂಕಿನ ನಿರ್ದೇಶಕ ಮಂಡಳಿಯೊಂದಿಗೆ ಮಧುರ ಸಂಬಂಧ ಇಟ್ಟುಕೊಂಡು ಬ್ಯಾಂಕಿನ ಸಂಪನ್ಮೂಲಗಳನ್ನು ಗಣನೀಯವಾಗಿ ಹೆಚ್ಚಿಸಲು ಸಹಕಾರ ನೀಡಿದ್ದಕ್ಕಾಗಿ ತಮಗೆಲ್ಲಾ ವಂದನೆಯನ್ನು ಅರ್ಪಿಸುತ್ತಿದ್ದೇವೆ.

**ನಿರ್ದೇಶಕ ಮಂಡಳಿ ಅಪ್ಪಣೆ ಮೇರೆಗೆ,**
**ಸಹಿ/–**
**ಡಿ. ಸಂಜೀವಣ್ಣ**
**ಮುಖ್ಯ ಕಾರ್ಯನಿರ್ವಾಹಕರು (ಪ್ರ).**

**ವಿಷಯ 7: 2019–20ನೇ ಸಾಲಿಗೆ ಬಡ್ಜೆಟ್ ಮಂಜೂರಾತಿಗಿಂತ ಹೆಚ್ಚುವರಿ ಖರ್ಚಾಗಿರುವ ಬಾಬತ್ತಿನ ಅನುಮೋದನೆ.**

| ಕ್ರಮ ಸಂಖ್ಯೆ | ವಿವರ | 2019–20ಕ್ಕೆ ಮಂಜೂರಾದದ್ದು | 2019–20ಕ್ಕೆ ಖರ್ಚಾದದ್ದು | ಹೆಚ್ಚುವರಿ |
|---|---|---|---|---|
| 1 | ಸಿಬ್ಬಂದಿ ಸಂಬಳ ಪಿಎಫ್ ವಗೈರೆ | 5,20,00,000.00 | 5,38,37,073.00 | 18,37,073.00 |
| 2 | ಇತರೇ ಖರ್ಚು | 12,00,000.00 | 12,85,408.72 | 85,408.72 |
| 3 | ಕಲ್ಪತರು ಏಜೆಂಟರ ಕಮೀಷನ್ | 11,00,000.00 | 11,12,240.00 | 12,240.00 |
| 4 | ವಾಹನ ರಿಪೇರಿ, ನಿರ್ವಹಣೆ | 4,00,000.00 | 4,10,118.00 | 10,118.00 |

1. ಸಿಬ್ಬಂದಿಗಳಿಗೆ ಕರ್ನಾಟಕ ರಾಜ್ಯ ಸರ್ಕಾರದ ಆರನೇ ವೇತನ ಆಯೋಗದ ವೇತನ ಶ್ರೇಣಿಯನ್ನು ಜಾರಿಗೊಳಿಸಿದುದರ ಸಲುವಾಗಿ ಸಿಬ್ಬಂದಿ ಸಂಬಳ, ಪಿ.ಎಫ್. ವಗೈರೆ ಖರ್ಚು ಹೆಚ್ಚಾಗಿರುತ್ತದೆ.

2. 2019–20ನೇ ಸಾಲಿನಲ್ಲಿ ಸಾಲಗಳ ವಸೂಲಿ ಪ್ರಕ್ರಿಯೆಗೆ ಸಿಬ್ಬಂದಿಗಳನ್ನು ನಿಯೋಜಿಸಿ ಅವರುಗಳಿಗೆ ಊಟ ಹಾಗೂ ಕನ್ವೇಯನ್ಸ್ ಭತ್ಯೆ ನೀಡಿರುವುದರಿಂದ ಇತರೇ ಖರ್ಚು ಹೆಚ್ಚಾಗಿರುತ್ತದೆ.

3. ಕಲ್ಪತರು ಏಜೆಂಟರುಗಳು ಕಲ್ಪತರು ಠೇವಣಿಯನ್ನು ಹೆಚ್ಚು ಸಂಗ್ರಹಿಸಿದುದರ ಸಲುವಾಗಿ ಏಜೆಂಟರ ಕಮೀಷನ್ ಹೆಚ್ಚಾಗಿರುತ್ತದೆ.

4. ಬ್ಯಾಂಕಿನ ಮೂರು ವಾಹನಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಹಾಗೂ ರಿಪೇರಿ ಮತ್ತು ನಿರ್ವಹಣೆ ವೆಚ್ಚವು ಹೆಚ್ಚಾಗಿರುವುದರಿಂದ ಖರ್ಚು ಹೆಚ್ಚಾಗಿರುತ್ತದೆ.

**ವಿಷಯ 8: 2019–20ನೇ ಸಾಲಿನ ನಿವ್ವಳ ನಫೆ ವಿಲೇವಾರಿ ಮತ್ತು ಲಾಭಾಂಶ (ಡಿವಿಡೆಂಡ್) ಘೋಷಣೆಗೆ ಮಂಜೂರಾತಿ ನೀಡುವುದು.**

| ಕ್ರ. ಸಂ. | ವಿವರ | ರೂ. ಪೈ. | ರೂ. ಪೈ. |
|---|---|---|---|
| | 2019–20ನೇ ಸಾಲಿನ ನಿವ್ವಳ ಲಾಭದ ಮೊತ್ತ | | **2,27,97,160.69** |
| 1 | ಆಪದ್ಧನ ನಿಧಿಗೆ ಶೇ.25 | 56,99,290 | 1,70,97,870.69 |
| 2 | ಸಹಕಾರ ವಿದ್ಯಾಭ್ಯಾಸ ನಿಧಿ ಶೇ.2 | 3,41,957.00 | 1,67,55,913.69 |
| 3 | ಕರ್ನಾಟಕ ರಾಜ್ಯ ಪಟ್ಟಣ ಸಹಕಾರಿ ಬ್ಯಾಂಕುಗಳ ಮಹಾಮಂಡಳ ಅಭಿವೃದ್ದಿ ಕಾರ್ಯಕ್ಕೆ ಶೇ.1 | 1,67,559.00 | 1,65,88,354.69 |
| 4 | ಕಟ್ಟಡ ನಿಧಿ | 10,00,000.00 | 1,55,88,354.69 |
| 5 | ಗಳಿಕೆ ರಜೆ ಕಾಯ್ದಿರಿಸಿದ ನಿಧಿ | 10,00,000.00 | 1,45,88,354.69 |
| 6 | ಹೂಡಿಕೆಗಳ ಏರಿಳಿತ ನಿಧಿ | 15,00,000.00 | 1,30,88,354.69 |
| 7 | ಸದಸ್ಯರುಗಳ ಮರಣ ಸಹಾಯಾರ್ಥ ನಿಧಿ | 14,00,000.00 | 1,16,88,354.69 |
| 8 | ವಿದ್ಯಾರ್ಥಿ ಪ್ರೋತ್ಸಾಹ ನಿಧಿ | 5,00,000.00 | 1,11,88,354.69 |
| 9 | ಧರ್ಮದ ನಿಧಿ | 2,00,000.00 | 1,09,88,354.69 |
| 10 | ಸಿಬ್ಬಂದಿ ಬೋನಸ್ ಶೇ 8 ರಂತೆ | 29,00,662.00 | 80,87,692.69 |
| 11 | ಷೇರು ಡಿವಿಡೆಂಡು ವಿತರಣಾ ನಿಧಿ ಶೇ.12 ರಂತೆ* | 80,73,168.00 | 14,524.69 |
| | ಉಳಿಕೆ ಮೊತ್ತ ಆಪದ್ಧನ ನಿಧಿಗೆ | 14,524.69 | 0.00 |
| | **ಒಟ್ಟು** | **2,27,97,160.69** | |

*** ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆಗೆ ಒಳಪಟ್ಟಿರುತ್ತದೆ.**

**ವಿಷಯ 9: 2020–21ನೇ ಸಾಲಿಗೆ ಬಜೆಟ್ ಮಂಜೂರಾತಿ ಪಟ್ಟಿಯನ್ನು ಅಂಗೀಕರಿಸುವುದು.**

| ಕ್ರ. ಸಂ. | ವಿವರ | 2019–20ನೇ ಸಾಲಿಗೆ ಶಿಫಾರಸ್ಸು | 2019–20ನೇ ಸಾಲಿಗೆ ತಗುಲಿದ ವೆಚ್ಚ | 2020–21ನೇ ಸಾಲಿಗೆ ಶಿಫಾರಸ್ಸು |
|---|---|---|---|---|
| 1 | ಠೇವಣಿಗಳ ಮತ್ತು ಸಾಲಗಳ ಮೇಲಿನ ಬಡ್ಡಿ | 19,50,00,000.00 | 18,97,89,021.00 | 20,00,00,000.00 |
| 2 | ಸಿಬ್ಬಂದಿ ಸಂಬಳ ಪಿಎಫ್ ವಗೈರೆ | 5,20,00,000.00 | 5,38,37,073.00 | 5,60,00,000.00 |
| 3 | ಅಂಚೆ, ತಂತಿ, ದೂರವಾಣಿ | 6,00,000.00 | 3,69,232.72 | 6,00,000.00 |
| 4 | ಬಾಡಿಗೆ, ತೆರಿಗೆ, ವಿದ್ಯುಚ್ಛಕ್ತಿ, ಇತರೇ | 80,00,000.00 | 71,32,516.20 | 80,00,000.00 |
| 5 | ಲೇಖನ ಸಾಮಗ್ರಿ ಮತ್ತು ಮುದ್ರಣ | 10,00,000.00 | 5,37,282.46 | 8,00,000.00 |
| 6 | ನಿರ್ದೇಶಕರ ಸಭೆ ಖರ್ಚು | 300,000.00 | 1,17,788.00 | 2,00,000.00 |
| 7 | ಸಮಾರಂಭ | 500,000.00 | 3,26,123.20 | 4,00,000.00 |
| 8 | ಇತರೇ ಖರ್ಚು | 12,00,000.00 | 12,85,408.72 | 8,00,000.00 |
| 9 | ಸರ್ವಸದಸ್ಯರ ಸಭೆ ಖರ್ಚು | 30,00,000.00 | 26,39,643.04 | 15,00,000.00 |
| 10 | ಜಾಹೀರಾತು | 6,00,000.00 | 2,75,511.00 | 6,00,000.00 |
| 11 | ವಿಮೆ ಕಂತು (ಬ್ಯಾಂಕು ಪಾಲಿಸಿ ಮತ್ತು ಠೇವಣಿ) | 55,00,000.00 | 50,47,093.00 | 70,00,000.00 |
| 12 | ಸಾರಿಗೆ ವೆಚ್ಚ/ತರಬೇತು/ಪ್ರಯಾಣ | 2,50,000.00 | 1,48,181.00 | 8,00,000.00 |
| 13 | ಸಂಘ ಸಂಸ್ಥೆಗಳ ನೊಂದಣಿ ಮತ್ತು ವಾರ್ಷಿಕ ಶುಲ್ಕ | 4,00,000.00 | 1,51,785.00 | 3,00,000.00 |
| 14 | ಕಾನೂನು ವೆಚ್ಚ | 10,00,000.00 | 9,51,735.00 | 10,00,000.00 |
| 15 | ಮರಮುಟ್ಟುಗಳು, ವಾಹನ, ಗಣಕಯಂತ್ರ ಇಳುವರಿ | 35,00,000.00 | 26,07,836.00 | 35,00,000.00 |
| 16 | ಕಲ್ಪತರು ಏಜೆಂಟರ ಕಮೀಷನ್ | 11,00,000.00 | 11,12,240.00 | 12,00,000.00 |
| 17 | ವಾಹನ ರಿಪೇರಿ, ನಿರ್ವಹಣೆ | 4,00,000.00 | 4,10,118.00 | 5,00,000.00 |
| 18 | ನಿರ್ದೇಶಕರ ಸಭಾ ಭತ್ಯೆ | 13,50,000.00 | 8,83,188.00 | 11,00,000.00 |
| 19 | ಗಣಕಯಂತ್ರಗಳ ನಿರ್ವಹಣೆ | 4,00,000.00 | 63,154.18 | 2,00,000.00 |
| 20 | ಇತರೇ ಯಂತ್ರಗಳ ನಿರ್ವಹಣೆ | 4,00,000.00 | 2,72,115.24 | 4,00,000.00 |
| 21 | ಸಾಫ್ಟ್‌ವೇರ್ ಖರ್ಚು (ಸಿಬಿಎಸ್, ಎಟಿಎಂ & ಇತರೇ) | 55,00,000.00 | 27,43,465.38 | 55,00,000.00 |
| 22 | ಸಿಬ್ಬಂದಿ ಗ್ರಾಚುಯಿಟಿ | 40,00,000.00 | 30,00,000.00 | 65,00,000.00 |
| 23 | ಸಮವರ್ತಿ ಆಡಿಟ್ ಶುಲ್ಕ ಮತ್ತು ಈಡಿಪಿ ಆಡಿಟ್ ಶುಲ್ಕ | 13,00,000.00 | 11,35,230.00 | 15,00,000.00 |
| 24 | ಲೆಕ್ಕ ಪರಿಶೋಧನಾ ಶುಲ್ಕ | 13,00,000.00 | 11,80,118.00 | 13,00,000.00 |
| 25 | ಕಛೇರಿ ನಿರ್ವಹಣೆ / ಪಾಲನೆ | 45,00,000.00 | 42,80,660.02 | 50,00,000.00 |
| 26 | ಎಂ.ಐ.ಸಿ.ಆರ್.ಖರ್ಚು | 5,00,000.00 | 3,37,243.79 | 5,00,000.00 |
| 27 | ಡಿಜಿಟಲ್ ಸಹಿ ಖರ್ಚು | 20,000.00 | 8,688.98 | 20,000.00 |
| 28 | ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ | 30,00,000.00 | 27,47,537.00 | 30,00,000.00 |
| | **ಒಟ್ಟು** | **29,66,20,000.00** | **28,33,89,988.19** | **30,82,20,000.00** |

**2019–20ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ**

| ಕ್ರಮ ಸಂಖ್ಯೆ | ವಿವರ | 2019–20ಕ್ಕೆ ಬಂದಿರುವ ವರಮಾನ | 2020–21ನೇ ಸಾಲಿನಲ್ಲಿ ನಿರೀಕ್ಷಣೆ |
|---|---|---|---|
| 1 | ಸಾಲಗಳ ಮೇಲಿನ ಬಡ್ಡಿ | 19,78,14,028.00 | 24,46,00,000.00 |
| 2 | ಹೂಡಿಕೆಗಳ ಮೇಲೆ ಬಡ್ಡಿ | 11,05,75,588.00 | 9,00,00,000.00 |
| 3 | ಕಮೀಷನ್ ವಗೈರೆ | 94,71,380.00 | 65,00,000.00 |
| 4 | ಇತರೇ | 38,17,173.00 | 5,00,000.00 |
| | **ಜುಮ್ಲಾ** | **32,16,78,169.00** | **34,16,00,000.00** |

| | | |
|---|---|---|
| 1 | 2020–21 ನೇ ಸಾಲಿಗೆ ನಿರೀಕ್ಷಿಸುವ ಅಂದಾಜು ವರಮಾನ | **34,16,00,000.00** |
| 2 | 2020–21 ನೇ ಸಾಲಿಗೆ ನಿಯಮಾನುಸಾರ ಈ ಕೆಳಕಂಡಂತೆ ಕಾದಿರಿಸುವುದು | |
| | ಅ) ಸಾಲಗಳ ಮೇಲೆ ಕಾಯ್ದಿರಿಸುವುದು | 35,00,000.00 |
| | ಆ) ಹೂಡಿಕೆಗಳ ಮೇಲೆ ಕಾಯ್ದಿರಿಸುವುದು | 6,00,000.00 |
| | | **33,75,00,000.00** |
| 3 | 2020–21 ನೇ ಸಾಲಿಗೆ ಅಂದಾಜು ಖರ್ಚು | 30,82,20,000.00 |
| | | 2,92,80,000.00 |
| 4 | ವರಮಾನ ತೆರಿಗೆ | 75,03,176.00 |
| 5 | 2020–21 ನೇ ಸಾಲಿಗೆ ನಿರೀಕ್ಷಿಸುವ ನಿವ್ವಳ ಲಾಭ | **2,17,77,176.00** |

**ವಿಷಯ 10: 2020–21ನೇ ಸಾಲಿಗೆ ಲೆಕ್ಕ ಪರಿಶೋಧನೆಗೆ, ಲೆಕ್ಕ ಪರಿಶೋಧಕರನ್ನು ನೇಮಿಸುವುದು ಹಾಗೂ ಅವರುಗಳ ಸಂಭಾವನೆ ನಿಗಧಿಪಡಿಸುವುದು.**

ದಿನಾಂಕ 31.10.2020 ರಂದು ನಡೆದ ನಿರ್ದೇಶಕ ಮಂಡಳಿ ಸಭೆಯಲ್ಲಿ ಚರ್ಚಿಸಿ ಮೆ: ಆಕಾಸಂ & ಅಸೋಸಿಯೇಟ್ಸ್ (ಸರ್ಕಾರದ ಎಂಪ್ಯಾನಲ್‌ಮೆಂಟ್‌ನಲ್ಲಿರುವವರು)ರವರನ್ನು ಮುಂದಿನ 2020–21ನೇ ಸಾಲಿಗೆ ಬ್ಯಾಂಕಿನ ಲೆಕ್ಕ ಪತ್ರಗಳ ಪರಿಶೋಧನೆಗೆ ನೇಮಕ ಮಾಡಲು ಸರ್ವಸದಸ್ಯರ ಸಭೆಯ ಅನುಮೋದನೆಗಾಗಿ ಶಿಫಾರಸ್ಸು ಮಾಡಿದೆ. ಲೆಕ್ಕ ಪರಿಶೋಧಕರ ಸಂಭಾವನೆಯನ್ನು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರು ಕಾಲಕಾಲಕ್ಕೆ ಹೊರಡಿಸುವ ಮಾರ್ಗ ಸೂಚಿಯ ಅನ್ವಯ ನೀಡಲು ಶಿಫಾರಸ್ಸು ಮಾಡಿ ಸರ್ವಸದಸ್ಯರ ಅನುಮೋದನೆಗೆ ಮಂಡಿಸಿದೆ.

**ವಿಷಯ 11: ಬ್ಯಾಂಕಿನ ಮುಂಬರುವ ವರ್ಷದ ಕಾರ್ಯಚಟುವಟಿಕೆಗಳ ಬಗ್ಗೆ ಆಡಳಿತ ಮಂಡಳಿಯ ರೂಪು ರೇಷೆ:**

**2020–21ರ ವಾರ್ಷಿಕ ಸಾಲಿಗೆ ನಮ್ಮ ನಿರ್ದೇಶಕರ ಮಂಡಳಿಯು ಕೆಳಕಂಡ ಗುರಿಗಳನ್ನು ಹೊಂದಿರುತ್ತದೆ.**

**1. ಬ್ಯಾಂಕಿನ ಒಟ್ಟಾರೆ ಠೇವಣಿ ಸಂಗ್ರಹದ ಗುರಿ ರೂ. 318.00 ಕೋಟಿಗಳು.**

2. **ಬ್ಯಾಂಕಿನ ಒಟ್ಟಾರೆ ಸಾಲ ಮುಂಗಡಗಳ ಗುರಿ ರೂ. 218.00 ಕೋಟಿಗಳು.**

3. **ಸದಸ್ಯರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳು ಉದಾಹರಣೆಗೆ ಬುಕ್ ಬ್ಯಾಂಕ್ ಸೇವೆಯನ್ನು ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರವನ್ನು ಹೆಚ್ಚು ಹೆಚ್ಚು ನೀಡಲು ಕ್ರಮವಿಡುವುದು.**

4. **ಬ್ಯಾಂಕು ಸ್ವಂತ ಕಟ್ಟಡಗಳನ್ನು ಹೊಂದುವ ಗುರಿ ಇಟ್ಟುಕೊಂಡಿದ್ದು ಅದೇ ಪ್ರಕಾರವಾಗಿ ಆನೇಕಲ್ ನಲ್ಲಿ ಬ್ಯಾಂಕು ಹೊಂದಿರುವ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಿಸುವುದು.**

5. **ಸರ್ಕಾರದ ಮುಂದಿನ ಆದೇಶದವರಗೆ ಶೇ.1 ಹಾಗೂ ಶೇ.3 ರ ಬಡ್ಡಿದರದ ನೇಕಾರಿಕೆ ಸಾಲಗಳನ್ನು ಮುಂದುವರೆಸಲಾಗುವುದು.**

6. **ಆಯಾ ಶಾಖಾ ಸ್ಥಳಗಳಲ್ಲಿಯೇ ಸದಸ್ಯರುಗಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸುವುದು.**

7. **ರುಪೇ ಡೆಬಿಟ್ ಕಾರ್ಡಿನ ಮುಖಾಂತರ ಎ.ಟಿ.ಎಂ ಸೌಲಭ್ಯಗಳನ್ನು ಹೊಂದಲು ವ್ಯವಸ್ಥೆ ಮಾಡುವುದು.**

8. **ನೇಕಾರ ಸದಸ್ಯರುಗಳಿಗೆ ಸರ್ಕಾರದ ಅನುದಾನಗಳನ್ನು ತ್ವರಿತವಾಗಿ ಒದಗಿಸುವುದು.**

9. **ಗ್ರಾಹಕರುಗಳಿಗೆ ತ್ವರಿತ ಸೇವೆ ಒದಗಿಸುವುದು.**

**ವಿಷಯ 12: ಬ್ಯಾಂಕಿನ ಅಧಿಕೃತ ಷೇರು ಬಂಡವಾಳಕ್ಕೆ ಸಭೆಯು ನೀಡಿದ್ದ ಅನುಮತಿಯನ್ನು ಮುಂದುವರಿಸುವ ಬಗ್ಗೆ.**

ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ಅಧಿಕೃತ ಷೇರು ಬಂಡವಾಳವನ್ನು ರೂ.20.00 ಕೋಟಿಗೆ ಅನುಮೋದನೆ ಪಡೆಯಲಾಗಿದ್ದು, ಪ್ರಸಕ್ತ ಸಾಲಿಗೆ ಅದನ್ನು ಮುಂದುವರೆಸಿಕೊಂಡು ಹೋಗಲು ಆಡಳಿತ ಮಂಡಳಿ ಶಿಫಾರಸ್ಸು ಮಾಡಿ ಸರ್ವಸದಸ್ಯರ ಅನುಮೋದನೆ ಕೋರಲಾಗಿದೆ.

**ವಿಷಯ 13: ಬ್ಯಾಂಕಿನ ನಿರ್ದೇಶಕರುಗಳಿಗೆ, ಅವರ ಹತ್ತಿರ ಸಂಬಂಧಿಗಳಿಗೆ ಮತ್ತು ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗೆ ನೀಡಿದ್ದ ಸಾಲಗಳು ಮತ್ತು ಇದರ ಸುಸ್ತಿ ಸಾಲಗಳು ಏನಾದರೂ ಇದ್ದಲ್ಲಿ ಅವುಗಳ ವಸೂಲಾತಿಗೆ ತೆಗೆದುಕೊಂಡ ಕ್ರಮಗಳ ಪರಿವೀಕ್ಷಣೆ.**

ಪ್ರಸಕ್ತ ಸಾಲಿನಲ್ಲಿ ಚುನಾಯಿತರಾದ ನಿರ್ದೇಶಕರುಗಳಿಗಾಗಲಿ, ಅವರ ಹತ್ತಿರದ ಸಂಬಂಧಿಕರುಗಳಿಗಾಗಲಿ ಅಥವಾ ಅವರ ಹಿತಾಸಕ್ತಿ ಇರುವ ಸಂಸ್ಥೆಗಳಿಗಾಗಲೀ ಯಾವುದೇ ರೀತಿಯ ಸಾಲವನ್ನು (ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ) ಮಂಜೂರು ಮಾಡಿರುವುದಿಲ್ಲ. ದಿ:25.07.2018ರಂದು ಹೊಸ ನಿರ್ದೇಶಕ ಮಂಡಳಿಯು ಅಸ್ಥಿತ್ವಕ್ಕೆ ಬಂದಿದ್ದು, ಹಾಲಿ ನಿರ್ದೇಶಕ ಮಂಡಳಿಯಲ್ಲಿರುವ ನಿರ್ದೇಶಕರಾದ ಶ್ರೀ ಪಿ. ದೇವರಾಜುರವರ ಸಹೋದರರಾದ ಶ್ರೀ ಪಿ. ಶಂಕರ್ ಹಾಗೂ ಶ್ರೀ ಪಿ. ಶಂಕರ್‌ರವರ ಪತ್ನಿ ಶ್ರೀಮತಿ ಗಿರಿಜಾರವರುಗಳು ತಲಾ ರೂ.8.00 ಲಕ್ಷಗಳಂತೆ ದಿ:20.02.2018ರಂದು ಸಾಲ ಪಡೆದಿದ್ದು

ಸದರಿ ಸಾಲದ ಖಾತೆಗಳು ದಿ:31.03.2020ಕ್ಕೆ ಅಸಲು ತಲಾ ರೂ.6,33,325/– ಗಳು ಬಾಕಿ ಇದ್ದು ಖಾತೆಗಳು ಸುಸ್ತಿ ಇರುವುದಿಲ್ಲ.

**ವಿಷಯ 14: ನಿರ್ದೇಶಕರು ಬ್ಯಾಂಕಿನ ಸೇವೆಗಳನ್ನು ಉಪಯೋಗಿಸಿಕೊಂಡಿರುವುದರ ಬಗ್ಗೆ ಅವಲೋಕಿಸುವುದು.**

ಪ್ರಸಕ್ತ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರು ಬ್ಯಾಂಕಿನ ವಿವಿಧ ಸೇವೆಗಳಾದ ಉಳಿತಾಯ/ ರೆಕರಿಂಗ್/ನಿಶ್ಚಿತ ಅವಧಿ ಠೇವಣಿ ಖಾತೆಗಳನ್ನು ಹೊಂದಿರುತ್ತಾರೆ.

## ಟೆಕ್ಸ್‌ಟೈಲ್ ಕೋ ಆಪರೇಟಿವ್ ಬ್ಯಾಂಕ್ ಲಿ.

**ವಿಷಯ 15:** ಬ್ಯಾಂಕಿನ ಉಪ ನಿಯಮಗಳಿಗೆ ಮಾಡಬೇಕಾದ ತಿದ್ದುಪಡಿಗಳ ಅನುಮೋದನೆ (ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ – ಹೊಸ ಸೇರ್ಪಡೆ)

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ಬೈಲಾದಲ್ಲಿ ಹೊಸ ಸೇರ್ಪಡೆ/ತಿದ್ದುಪಡಿಸಿದ ನಿಯಮ | ಕಾರಣ |
|---|---|---|---|---|
| 1 | ಅಧ್ಯಾಯ 21<br>135 | ಇಲ್ಲ | **ನಿರ್ವಹಣಾ ಮಂಡಳಿ (Board of Management) ರಚನೆ**<br>ಬ್ಯಾಂಕಿನ ಒಟ್ಟು ಠೇವಣಿಗಳು ರೂ.100 ಕೋಟಿ ಅಥವಾ ಅದಕ್ಕಿಂತ ಹೆಚ್ಚಾಗಿದ್ದಲ್ಲಿ ಅಂಥಹ ಬ್ಯಾಂಕುಗಳು ನಿರ್ದೇಶಕ ಮಂಡಳಿ (BoD) ಯೊಂದಿಗೆ ನಿರ್ವಾಹಣಾ ಮಂಡಳಿ (BoM) ಹೊಂದಿರಬೇಕು. ನಿರ್ವಾಹಣಾ ಮಂಡಳಿಯನ್ನು ನಿರ್ದೇಶಕ ಮಂಡಳಿ ಸುತ್ತೋಲೆ ಹೊರಡಿಸಿದ ಒಂದು ವರ್ಷ ಅವಧಿಯ ಒಳಗಾಗಿ ರಚಿಸಬೇಕು. ಆ ರೀತಿ ರಚಿಸಲಾದ ನಿರ್ವಾಹಣಾ ಮಂಡಳಿಗೆ ಈ ಕೆಳಗೆ ವಿವರಿಸಲಾದ ಕರ್ತವ್ಯಗಳ ಜೊತೆಗೆ BoD ಯು ಬ್ಯಾಂಕಿನ ಸಮರ್ಪಕ ಕಾರ್ಯ ನಿರ್ವಹಣೆಗೆ ಅವಶ್ಯಕವೆಂದು ಕಂಡು ಬಂದ ಹೆಚ್ಚುವರಿ ಕರ್ತವ್ಯಗಳನ್ನು ನಿಯೋಜಿಸಬಹುದು. | ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ DOR (PCB), BPD, CIR No. 8/ 12.05.002/2019-20 ದಿನಾಂಕ 31.12.2019ರ ಅನ್ವಯ BOM ಸ್ಥಾಪಿಸ ಬೇಕಾಗಿರುತ್ತದೆ. |
| | 135.01 | | **ನಿರ್ವಹಣಾ ಮಂಡಳಿಯ ಕರ್ತವ್ಯಗಳು :–**<br>ಪಟ್ಟಣ ಸಹಕಾರ ಬ್ಯಾಂಕುಗಳ ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಕಾರ್ಯಗಳನ್ನು BoM ಮೇಲ್ವಿಚಾರಣೆ ಮಾಡುತ್ತದೆ. ನೀತಿಗಳನ್ನು ಸಿದ್ಧಪಡಿಸಲು ಮತ್ತು ಇತರೆ ನಿಯೋಜಿಸಲ್ಪಟ್ಟ ವಿಷಯಗಳ ಕುರಿತಂತೆ, ಬ್ಯಾಂಕಿನ ಸರಿಯಾದ ಕಾರ್ಯನಿರ್ವಹಣೆಗಾಗಿ BoM ಆಡಳಿತ ಮಂಡಳಿಗೆ (BoD) ನೆರವು ನೀಡುತ್ತದೆ. BoM ನ ಕಾರ್ಯಗಳು ಈ ಕೆಳಗಿನವುಗಳನ್ನು ಒಳಗೊಂಡಿರುತ್ತದೆ.<br>1. ನಿರ್ದೇಶಕ ಮಂಡಳಿಯು ಅನುಮೋದಿಸಿರುವ ನೀತಿಗೆ ಅನುಗುಣವಾಗಿ | |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ಬೈಲಾದಲ್ಲಿ ಹೊಸ ಸೇರ್ಪಡೆ/ತಿದ್ದುಪಡಿಸಿದ ನಿಯಮ | ಕಾರಣ |
|---|---|---|---|---|
| | | | ಸಾಲದ ಪ್ರಸ್ತಾಪನೆಗಳನ್ನು ಪರಿಗಣಿಸುವುದು ಮತ್ತು ಸಾಲ ಸಮಿತಿ ಅಥವಾ ನಿರ್ದೇಶಕ ಮಂಡಳಿಗೆ ಅನುಮೋದನೆಗೆ ಶಿಫಾರಸ್ಸು ಮಾಡುವುದು.<br>2. ಅನುತ್ಪಾದಕ ಆಸ್ತಿಗಳ ವಸೂಲಾತಿಗೆ ಶಿಫಾರಸ್ಸು ಮಾಡುವುದು; ಏಕಕಾಲಿಕ ತಿರುವಳಿ ಅಥವಾ ರಾಜಿ ಸಂಧಾನದ ಮೂಲಕ.<br>3. ನಿಧಿ ಮತ್ತು ಸಾಲಗಳ ನಿರ್ವಹಣೆ.<br>4. ನಿರ್ದೇಶಕ ಮಂಡಳಿಯು ಅನುಮೋದಿಸಿರುವ ನೀತಿಗೆ ಅನುಗುಣವಾಗಿ ಹೂಡಿಕೆ ಪ್ರಸ್ತಾಪಗಳನ್ನು ಪರಿಗಣಿಸುವುದು ಮತ್ತು ಹೂಡಿಕೆ ಸಮಿತಿ ಅಥವಾ ನಿರ್ದೇಶಕ ಮಂಡಳಿಯ ಅನುಮೋದನೆಗೆ ಶಿಫಾರಸ್ಸು ಮಾಡುವುದು.<br>5. ಉತ್ತಮ ಆಂತರಿಕ ನಿಯಂತ್ರಣ ಮತ್ತು ವ್ಯವಸ್ಥೆಯನ್ನು ಅಳವಡಿಸುವುದು ಮತ್ತು ಅಪಾಯ ನಿರ್ವಹಣಾ ನೀತಿಯ ಸಿದ್ಧತೆ / ಅನುಷ್ಠಾನ.<br>6. ಗಣಕೀಕರಣ ಮತ್ತು ತಂತ್ರಜ್ಞಾನ ಅಳವಡಿಕೆ ಮತ್ತು ಈ ಕುರಿತು ಮೇಲ್ವಿಚಾರಣೆ.<br>7. ಆಂತರಿಕ ಲೆಕ್ಕಪರಿಶೋಧನೆ ಮತ್ತು ತಪಾಸಣೆ ಕಾರ್ಯ ನೋಡಿಕೊಳ್ಳುವುದು ಮತ್ತು ಅನುಸರಣೆ / ಅನುಪಾಲನಾ ಕಾರ್ಯಗಳು.<br>8. ಗ್ರಾಹಕರ ಸೇವೆ, ದೂರುಗಳ ನಿರ್ವಹಣೆ / ಕುಂದು ಕೊರತೆ ಪರಿಹಾರ.<br>9. ಆಡಳಿತ ಮಂಡಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗ ಸೂಚಿಗಳಂತೆ ನೀತಿ/ನಿಯಮ ರೂಪಿಸಲು ಸಹಾಯ ಮಾಡುವುದು ಅದರಲ್ಲೂ ಪ್ರಮುಖವಾಗಿ ಸಾಲ ನಿಯಮಾವಳಿಗಳು, ಹೂಡಿಕೆ ನೀತಿ, ವಸೂಲಾತಿ ನಿಯಮಾವಳಿಗಳು ಆಸ್ತಿ ಭಾಧ್ಯತೆ ನಿರ್ವಹಣೆ, ಸಂಕಷ್ಟ ನಿರ್ವಹಣೆ ಇತ್ಯಾದಿ. | |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ಬೈಲಾದಲ್ಲಿ ಹೊಸ ಸೇರ್ಪಡೆ/ತಿದ್ದುಪಡಿಸಿದ ನಿಯಮ | ಕಾರಣ |
|---|---|---|---|---|
| | | | 10. ಆಡಳಿತ ಮಂಡಳಿಯಿಂದ ನಿಯೋಜಿಸಲಾದ ಇನ್ನಿತರ ಯಾವುದೇ ಜವಾಬ್ದಾರಿಗಳು.<br>ನಿರ್ವಾಹಕ ಮಂಡಳಿಯ ಶಿಫಾರಸ್ಸು ಕುರಿತು ನಿರ್ದೇಶಕ ಮಂಡಳಿ ಭಿನ್ನಾಭಿಪ್ರಾಯ ಹೊಂದಿದ್ದ ಪಕ್ಷದಲ್ಲಿ, ಅದು ಈ ಕುರಿತು ಸಕಾರಣವನ್ನು ಲಿಖಿತವಾಗಿ ದಾಖಲಿಸುವ ಮೂಲಕ ಕ್ರಮ ಜರುಗಿಸಬಹುದಾಗಿದೆ. | |
| | 135.02 | | **ನಿರ್ವಹಣಾ ಮಂಡಳಿಯ ಗಾತ್ರ :**<br>ಸಹಕಾರ ಬ್ಯಾಂಕುಗಳ ನಿರ್ವಹಣಾ ಮಂಡಳಿಯಲ್ಲಿ ಕನಿಷ್ಟ ಐದು (ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು ಹೊರತುಪಡಿಸಿ) ಸದಸ್ಯರನ್ನು ಹೊಂದಿರಬೇಕು. ನಿರ್ವಹಣಾ ಮಂಡಳಿಯ ಗರಿಷ್ಟ ಸಂಖ್ಯೆ 12ನ್ನು ಮೀರಬಾರದು. ಮುಖ್ಯಕಾರ್ಯನಿರ್ವಹಣಾಧಿಕಾರಿಯು ಮತದಾನದ ಅಧಿಕಾರ ಹೊಂದಿರದ ಸದಸ್ಯರಾಗಿರುತ್ತಾರೆ. | |
| | 135.03 | | **ನಿರ್ವಹಣಾ ಮಂಡಳಿಯ ಸದಸ್ಯರ ಅರ್ಹತೆಗಳು :**<br>1. ನಿರ್ವಹಣಾ ಮಂಡಳಿಯ ಎಲ್ಲ ಸದಸ್ಯರು ಈ ಕೆಳಗಿನ ಒಂದು ಹೆಚ್ಚಿನ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನ ಅಥವಾ ಪ್ರಾಯೋಗಿಕ ಅನುಭವ ಹೊಂದಿರುವ ವ್ಯಕ್ತಿಗಳನ್ನು ಒಳಗೊಂಡಿರಬೇಕು. ಅವುಗಳೆಂದರೆ 1) ಅಕೌಂಟೆನ್ಸಿ, 2) ಕೃಷಿ ಮತ್ತು ಗ್ರಾಮೀಣ ಆರ್ಥಿಕತೆ, 3) ಬ್ಯಾಂಕಿಂಗ್, 4) ಸಹಕಾರ, 5) ಅರ್ಥಶಾಸ್ತ್ರ, 6) ಹಣಕಾಸು, 7) ಕಾನೂನು, 8) ಲಘು ಉದ್ಯಮ, 9) ಮಾಹಿತಿ ತಂತ್ರಜ್ಞಾನ, 10) ಸಹಕಾರ ಬ್ಯಾಂಕುಗಳಿಗೆ ಉಪಯುಕ್ತವಾಗುವ ಇನ್ನಿತರೆ ವಿಶೇಷ ಜ್ಞಾನ. | |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ಬೈಲಾದಲ್ಲಿ ಹೊಸ ಸೇರ್ಪಡೆ/ತಿದ್ದುಪಡಿಸಿದ ನಿಯಮ | ಕಾರಣ |
|---|---|---|---|---|
| | | | 2. ನಿರ್ವಹಣಾ ಮಂಡಳಿಯ ಸದ್ಯಸರು ಮೇಲೆ–1ರಲ್ಲಿ ನೀಡಲಾದ ಯೋಗ್ಯ ಮತ್ತು ತಕ್ಕ ಮಾನದಂಡಗಳನ್ನು ಹೊಂದಿದವರಾಗಿರಬೇಕು.<br>3. ಆಡಳಿತ ಮಂಡಳಿ ಸದಸ್ಯರು (BoD) ನಿಗಧಿಪಡಿಸಲಾದ ಮಾನದಂಡಗಳನ್ನು ಹೊಂದಿದವರಾಗಿದ್ದರೆ ನಿರ್ವಹಣಾ ಮಂಡಳಿಗೆ (BoM) ತೆಗೆದುಕೊಳ್ಳಬಹುದು. ಆದರೆ BoM ನಲ್ಲಿ BoD ಯ ಸದಸ್ಯರ ಸಂಖ್ಯೆ ಶೇ. 50 ರಷ್ಟು ಮೀರತಕ್ಕದ್ದಲ್ಲ. ಎಲ್ಲ ಸಂದರ್ಭಗಳಲ್ಲಿ, ಕನಿಷ್ಠ ಇಬ್ಬರು ಸದಸ್ಯರು BoD ಯ ಸದಸ್ಯರಾಗಿರಬಾರದು.<br>4. BoM ನ ಒಬ್ಬ ಸದಸ್ಯನನ್ನು ಒಂದಕ್ಕಿಂತ ಹೆಚ್ಚಿನ ಬ್ಯಾಂಕಿಗೆ ನೇಮಕ ಮಾಡಬಹುದಾಗಿದ್ದು, ಗರಿಷ್ಟ ಮೂರು ಬ್ಯಾಂಕುಗಳಿಗೆ ನೇಮಕ ಮಾಡಬಹುದು, ಆದರೆ ಅಂತಹ ಬ್ಯಾಂಕುಗಳ ಕಾರ್ಯವ್ಯಾಪ್ತಿಯು ಒಂದರ ಮೇಲೆ ಇನ್ನೊಂದು ಅತಿಕ್ರಮಿಸಿರಬಾರದು.<br>5. ಸಂಬಂಧಿಸಿದ ಸಹಕಾರ ಸಂಘಗಳ ಕಾಯ್ದೆಯಡಿ ನೀಡಲಾದ ಆಡಳಿತ ಮಂಡಳಿ ಸದಸ್ಯರ ಅನರ್ಹತೆಗಳು ನಿರ್ವಹಣಾ ಸದಸ್ಯರಿಗೂ ಅನ್ವಯವಾಗುತ್ತವೆ. | |
| | 135.04 | | **ನಿರ್ವಹಣಾ ಮಂಡಳಿಯ ಸಭೆಗಳು :**<br>ಅಗತ್ಯತೆಯನ್ನು ಪರಿಗಣಿಸಿ ಅಂತಹ ನಿಯತಕಾಲದಲ್ಲಿ ನಿರ್ವಹಣಾ ಮಂಡಳಿಯ ಸಭೆಗಳನ್ನು ನಡೆಸಬಹುದು. ಸಭೆಗಳ ಅಧ್ಯಕ್ಷತೆಯನ್ನು ವಹಿಸುವ ಅಧ್ಯಕ್ಷರು ಆಯ್ಕೆಯನ್ನು ನಿರ್ವಹಣಾ ಮಂಡಳಿಯ ಸದಸ್ಯರು ತಮ್ಮಲ್ಲೆ ಆಯ್ಕೆ ಮಾಡಬಹುದು ಅಥವಾ ನಿರ್ದೇಶಕ ಮಂಡಳಿಯು ಆಯ್ಕೆ ಮಾಡಬಹುದು. ಯಾವುದೇ ಸಂದರ್ಭದಲ್ಲಿ BoD ಅಧ್ಯಕ್ಷರನ್ನು BoM ನ | |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ಬೈಲಾದಲ್ಲಿ ಹೊಸ ಸೇರ್ಪಡೆ/ತಿದ್ದುಪಡಿಸಿದ ನಿಯಮ | ಕಾರಣ |
|---|---|---|---|---|
| | | | ಅಧ್ಯಕ್ಷರನ್ನಾಗಿ ಆಯ್ಕೆ ಮಾಡಬಾರದು ಮತ್ತು ಪ್ರತಿ ಪಟ್ಟಣ ಸಹಕಾರ ಬ್ಯಾಂಕು ಪ್ರತಿ ನಿರ್ವಹಣಾ ಮಂಡಳಿಯ ಸಭೆಯ ನಡುವಳಿಗಳನ್ನು ದಾಖಲಿಸಬೇಕು ಮತ್ತು ಅದನ್ನು ಆಡಳಿತ ಮಂಡಳಿ ಸಭೆಗೆ ಸಾದರಪಡಿಸಬೇಕು. ನಿರ್ವಹಣಾ ಮಂಡಳಿಯ ಸದಸ್ಯರ ಎರಡನೇ ಮೂರರಷ್ಟು ಸಂಖ್ಯೆಯ ಸದಸ್ಯರಿದ್ದಲ್ಲಿ ಅದನ್ನು ಕೋರಂ ಎಂದು ಪರಿಗಣಿಸಲ್ಪಡುತ್ತದೆ. | |
| | 135.05 | | **ನಿರ್ವಹಣಾ ಮಂಡಳಿಯ ಸಭಾಭತ್ಯೆ :**<br>ನಿರ್ವಹಣಾ ಮಂಡಳಿಯ ಸದಸ್ಯರ ಸೇವೆಗಾಗಿ ಸಹಕಾರ ಬ್ಯಾಂಕುಗಳ ಉಪವಿಧಿಗಳಲ್ಲಿ ನಿಗದಿಪಡಿಸಲಾದ ಅಥವಾ ನಿರ್ದೇಶಕ ಮಂಡಳಿಯು ಅನುಮೋದನೆ ನೀಡಿರುವ ಸಭಾಭತ್ಯೆ / ಇತರೆ ಭತ್ಯೆಗಳನ್ನು ಪಾವತಿಸಬಹುದಾಗಿದೆ. | |
| | 135.06 | | **ನಿರ್ವಹಣಾ ಮಂಡಳಿಯ ಅಧಿಕಾರವಧಿ :**<br>ನಿರ್ವಹಣಾ ಮಂಡಳಿಯ ಅಧಿಕಾರವಧಿಯು ನಿರ್ದೇಶಕ ಮಂಡಳಿಯ ಅಧಿಕಾರವಧಿಯೊಂದಿಗೆ ಕೊನೆಗೊಳ್ಳುತ್ತದೆ. | |
| | 135.07 | | **ನಿರ್ದೇಶಕ ಮಂಡಳಿಯ / ಆಡಳಿತ ಮಂಡಳಿಯ ಕಾರ್ಯಗಳು :**<br>ನಿರ್ದೇಶಕ ಮಂಡಳಿಯು ಪಟ್ಟಣ ಸಹಕಾರ ಬ್ಯಾಂಕುಗಳ ನಿಯಂತ್ರಣ ಮತ್ತು ಸಾಮಾನ್ಯ ನಿರ್ದೇಶನ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಇದರ ಸದಸ್ಯರು ಆಯಾ ಸಹಕಾರ ಸಂಘಗಳ ಕಾಯ್ದೆಗಳಲ್ಲಿ ಇರುವ ಎಲ್ಲ ಆಡಳಿತಾತ್ಮಕ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ನಿರ್ದೇಶಕ ಮಂಡಳಿಯು ನೀತಿ ರೂಪಿಸುವ ಅಗ್ರ ನಿಕಾಯವಾಗಿರುತ್ತದೆ ಮತ್ತು ಮಂಡಳಿಯು ತನ್ನ | |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ಬೈಲಾದಲ್ಲಿ ಹೊಸ ಸೇರ್ಪಡೆ/ತಿದ್ದುಪಡಿಸಿದ ನಿಯಮ | ಕಾರಣ |
|---|---|---|---|---|
| | | | ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ನೆರವಾಗಲು ನಿರ್ವಹಣಾ ಮಂಡಳಿಯನ್ನೊಳಗೊಂಡಂತೆ ವಿವಿಧ ಸಮಿತಿಗಳನ್ನು ರಚಿಸುತ್ತದೆ. ವಿವಿಧ ಸಮಿತಿಗಳಿಗೆ ಸೂಕ್ತವಾದ ಅಧಿಕಾರವನ್ನು ನಿಯೋಜಿಸುತ್ತದೆ. ನಿರ್ದೇಶಕ ಮಂಡಳಿಯು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಮೇಲೆ–1 ರಲ್ಲಿ ನಿಗಧಿಪಡಿಸಲಾದ ಯೋಗ್ಯ ಮತ್ತು ತಕ್ಕ ಮಾನದಂಡ ಹೊಂದಿರುವ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳಬಹುದು. ರೂ.100 ಕೋಟಿಗಿಂತ ಅಧಿಕ ಠೇವಣಿ ಹೊಂದಿರುವ ಸಹಕಾರ ಬ್ಯಾಂಕುಗಳು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯ ನೇಮಕ ಮಾಡುವಾಗ ಭಾರತೀಯ ರಿಸರ್ವ್ ಬ್ಯಾಂಕಿನ ಪೂರ್ವಾನುಮತಿಯನ್ನು ಪಡೆಯಬೇಕು. | |
| | 135.08 | | **ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಕಾರ್ಯಗಳು :**<br>ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ನಿರ್ದೇಶಕ ಮಂಡಳಿಯ ಸಾಮಾನ್ಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದಲ್ಲಿರುತ್ತಾರೆ. ನಿರ್ದೇಶಕ ಮಂಡಳಿಯು ನಿಯೋಜಿಸುವ ಅಧಿಕಾರಗಳನ್ನು ಮತ್ತು ಕಾರ್ಯಗಳನ್ನು ಇವರು ನಿರ್ವಹಿಸುತ್ತಾರೆ, ಇವರು ನಿರ್ದೇಶಕ ಮಂಡಳಿ ಮತ್ತು ನಿರ್ವಹಣಾ ಮಂಡಳಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. | |
| | 135.09 | | **ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO) ಮತ್ತು ನಿರ್ವಹಣಾ ಮಂಡಳಿಯ (BoM) ನ ಮೇಲಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಗಳು :**<br>ಮುಖ್ಯ ಕಾರ್ಯನಿರ್ವಹಣಾಧಿಕಾರಿ (CEO) ಮತ್ತು ಅಥವಾ ನಿರ್ವಹಣಾ ಮಂಡಳಿಯ (BoM) ಯಾವುದೇ ಸದಸ್ಯನು ಭಾರತೀಯ ರಿಸರ್ವ್ ಬ್ಯಾಂಕ್ ನಿಗಧಿಪಡಿಸಿದ ಮಾನದಂಡಗಳನ್ನು ಹೊಂದಿರದೇ ಇದ್ದಲ್ಲಿ ಬ್ಯಾಂಕಿನ | |

| ಕ್ರಮ ಸಂಖ್ಯೆ | ಬೈಲಾ ಸಂಖ್ಯೆ | ಹಾಲಿ ಇರುವ ನಿಯಮ | ಬೈಲಾದಲ್ಲಿ ಹೊಸ ಸೇರ್ಪಡೆ/ತಿದ್ದುಪಡಿಸಿದ ನಿಯಮ | ಕಾರಣ |
|---|---|---|---|---|
| | | | ಅಥವಾ ಠೇವಣಿದಾರರ ಅಥವಾ ಇಬ್ಬರ ಹಿತ್ತಾಸಕ್ತಿಗೆ ಮಾರಕವಾಗುವಂತೆ ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅಂತಹ ವ್ಯಕ್ತಿಯನ್ನು ತೆಗೆಯುವ ಅಧಿಕಾರ ಭಾರತೀಯ ರಿಸರ್ವ್ ಬ್ಯಾಂಕಿಗೆ ಇರುತ್ತದೆ. ನಿರ್ವಹಣಾ ಮಂಡಳಿಯ (BoM) ಯಾವುದೇ ಸದಸ್ಯನನ್ನು ತೆಗೆದುಹಾಕುವ ಅಥವಾ (BoM) ನ ಯಾವುದೇ ಸದಸ್ಯನು ನೀಡಿದ ರಾಜೀನಾಮೆಯನ್ನು ಆಡಳಿತ ಮಂಡಳಿಯು (BoD) ಅಂಗೀಕರಿಸುವ ಮೊದಲು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಪಡೆಯಬೇಕು. ನಿರ್ವಹಣಾ ಮಂಡಳಿಯ (BoM) ನ ಕಾರ್ಯನಿರ್ವಹಣೆಯು ಸಮರ್ಪಕವಾಗಿಲ್ಲವೆಂದು ಕಂಡುಬಂದಲ್ಲಿ ಅದನ್ನು ರದ್ದುಗೊಳಿಸುವ ಅಧಿಕಾರ ಭಾರತೀಯ ರಿಸರ್ವ್ ಬ್ಯಾಂಕಿಗೆ ಇರುತ್ತದೆ. (BoM) ನ ಯಾವುದೇ ಸದಸ್ಯನನ್ನು ಅಥವಾ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯನ್ನು (CEO) ತೆಗೆದು ಹಾಕಿದಾಗ ಅಥವಾ ನಿರ್ವಹಣಾ ಮಂಡಳಿಯ (BoM) ಯನ್ನು ರದ್ದುಗೊಳಿಸಿದಾಗ ಆಡಳಿತ ಮಂಡಳಿ (BoD) ಯು ಆಯಾ ಪ್ರಕರಣಕ್ಕೆ ಅನ್ವಯವಾಗುವಂತೆ ಮೂರು ತಿಂಗಳುಗಳ ಒಳಗಾಗಿ ಹೊಸ ಸದಸ್ಯರ ಅಥವಾ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ನೇಮಕಾತಿ ಅಥವಾ ಹೊಸ ನಿರ್ವಹಣಾ ಮಂಡಳಿಯ (BoM) ರಚನೆಯನ್ನು ಪೂರ್ಣಗೊಳಿಸಬೇಕು. ಈ ಸಂದರ್ಭದಲ್ಲಿ ಮಧ್ಯಂತರ ವ್ಯವಸ್ಥೆಯಾಗಿ ಆಡಳಿತ ಮಂಡಳಿ (BoM) ಯು ನಿರ್ವಹಣಾ ಮಂಡಳಿಯ (BoD) ಕಾರ್ಯಗಳನ್ನು ನಿರ್ವಹಿಸಬೇಕು. | |

## ನವೆಂಬರ್ 2019ರಲ್ಲಿ ಬ್ಯಾಂಕಿನಿಂದ ಜರುಗಿದ ಕನ್ನಡ ರಾಜ್ಯೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದ ಭಾವಚಿತ್ರಗಳು



ಕನ್ನಡ ರಾಜ್ಯೋತ್ಸವ ಹಾಗೂ ಪ್ರತಿಭಾ ಪುರಸ್ಕಾರ
ಸಮಾರಂಭದಲ್ಲಿ ಕಾರ್ಯಕ್ರಮದ
ಮುಖ್ಯ ಅತಿಥಿಗಳೊಂದಿಗೆ ನಿರ್ದೇಶಕ ಮಂಡಳಿ ಸದಸ್ಯರು



ಮುಖ್ಯ ಅತಿಥಿಗಳೊಂದಿಗೆ ಜ್ಯೋತಿ ಬೆಳಗಿಸುವ ಮೂಲಕ
ಕಾರ್ಯಕ್ರಮ ಉದ್ಘಾಟಿಸಿದ ಸಂದರ್ಭ



ಹಿಂದಿನ ಅಧ್ಯಕ್ಷರಾದ ಶ್ರೀ ಡಿ. ಹೆಚ್. ಜಗನ್ನಾಥ್‌ರವರಿಂದ
ಪ್ರತಿಭಾವಂತ ವಿದ್ಯಾರ್ಥಿನಿಯನ್ನು ಸನ್ಮಾನಿಸಿದ ಸಂದರ್ಭ



ಬ್ಯಾಂಕಿನ ಹಾಲಿ ಅಧ್ಯಕ್ಷರಾದ
ಶ್ರೀ ಕೃ. ಅಶ್ವತ್ಥನಾರಾಯಣರವರಿಂದ
ಪ್ರತಿಭಾವಂತ ವಿದ್ಯಾರ್ಥಿನಿಯನ್ನು ಸನ್ಮಾನಿಸಿದ ಸಂದರ್ಭ

## ಮುಖ್ಯ ಶಾಖೆ :

1ನೇ ಮಹಡಿ, ದೇವಾಂಗ ಮಾರ್ಕೆಟ್, ಜೆ.ಎಂ. ರಸ್ತೆ, ಬೆಂಗಳೂರು – 560 002 ಫೋನ್ : 22217905, 22237655

## ಶಾಖೆಗಳು :

| | | |
|---|---|---|
| ಸುಧಾಮನಗರ | : | ನಂ.16, 1ನೇ 'ಎ' ಮುಖ್ಯರಸ್ತೆ, ಸುಧಾಮನಗರ, ಬೆಂಗಳೂರು – 560 027. ಫೋನ್: 41241207. |
| ಆಡುಗೋಡಿ | : | ನಂ.11, 3ನೇ ಅಡ್ಡರಸ್ತೆ, ಗ್ರಾಮ ದೇವತಾ ಬೀದಿ, ಆಡುಗೋಡಿ, ಬೆಂಗಳೂರು–560030. ಫೋನ್: 25703133. |
| ಮಾಗಡಿ ರಸ್ತೆ | : | ನಂ.38/1, 7ನೇ ಅಡ್ಡರಸ್ತೆ, (ಅಂಜನ್ ಟಾಕೀಸ್ ಹತ್ತಿರ), ಮಾಗಡಿ ಮುಖ್ಯರಸ್ತೆ, ಬೆಂಗಳೂರು – 560 023. ಫೋನ್: 23389481. |
| ಲಕ್ಷ್ಮೀನಾರಾಯಣಪುರ | : | ನಂ.14/4, 10ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಬೆಂಗಳೂರು–560021. ಫೋನ್: 23325357. |
| ಗೊಟ್ಟಿಗೆರೆ | : | ನಂ.1562/1575/825, 2ನೇ ಅಡ್ಡರಸ್ತೆ, ವೀವರ್ಸ್ ಕಾಲೋನಿ, ಗೊಟ್ಟಿಗೆರೆ ಪೋಸ್ಟ್, ಬೆಂಗಳೂರು – 560 083. ಫೋನ್: 28429403. |
| ಆನೇಕಲ್ | : | ನಂ.1/1, ತಾಲ್ಲೂಕು ಕಛೇರಿ ರಸ್ತೆ, ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಎದುರು, ಆನೇಕಲ್, ಬೆಂಗಳೂರು – 562 106. ಫೋನ್: 27830603. |
| ನೆಲಮಂಗಲ | : | ಖಾತ ನಂ.3921/2661/12, 3584/2661/1, ವೀವರ್ಸ್ ಕಾಲೋನಿ, ನೆಲಮಂಗಲ ಟೌನ್, ಬೆಂಗಳೂರು – 562 123. ಫೋನ್: 27722993. |
| ಉತ್ತರಹಳ್ಳಿ | : | ನಂ.56/4, 8/2, ಆಂಜನೇಯ ಸ್ವಾಮಿ ದೇವಸ್ಥಾನ ಹತ್ತಿರ, ಸುಬ್ರಮಣ್ಯಪುರ ಪೋಸ್ಟ್, ಉತ್ತರಹಳ್ಳಿ, ಬೆಂಗಳೂರು – 560061. ಫೋನ್: 26394039. |
| ಯಲಹಂಕ | : | ವೈಸಿಸಿ ಪ್ರೀಮಿಯರ್ ಕಾಂಪ್ಲೆಕ್ಸ್, ನಂ.306/728, ಟಿಎಂಸಿ ರಸ್ತೆ, ಯಲಹಂಕ ಹಳೇಬಸ್ ನಿಲ್ದಾಣ ಹತ್ತಿರ, ಹಳೇ ಯಲಹಂಕ ಟೌನ್, ಬೆಂಗಳೂರು – 560 064. ಫೋನ್ : 28562373. |

**BOOK-POST**

To,
Smt./Sri

*If undelivered please return to :*

**TEXTILE CO-OPERATIVE BANK LTD.**

**A.O. : Devanga Market, Jumma Masjid Road, Bengaluru - 560 002.**

**Phone : 22217905, 22237655**